ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೯ ಅಕ್ಟೋಬರ್-೨೦೦೮ ಸಂಚಿಕೆ-೩



ಅಭಿವೃದ್ಧಿಯ ನೀತಿಯಾಗಿ ಸರ್ವೋದಯ

ಜನಪದ ವಿಚಾರದಲ್ಲಿ

ಅಕ್ಟೋಬರ್–೨೦೦೮

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಕ್ಟೋಬರ್ - ೨೦೦೮
ಸಂಪುಟ - ೯
ಸಂಚಿಕೆ - ೩

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☏ ೦೮೨೩೬ ೩೧೬೩೪೪
e-mail - janapada@yahoo.com

ಹಸಿವು

ಹೊಟ್ಟೆಯ ಕಾವಿಗೆ ನೀರಾಗುತ್ತದೆ ಕಬ್ಬಿಣ
ಹೊಟ್ಟೆ ಕೂಗುವ ಕೂಗು ನುಂಗೀತು ಕಡಲ ಮೊರೆತ
ಹೊಟ್ಟೆಯಾರ್ಭಟ ಕೇಳಿ ಕಲ್ಕಿ ಬಂದಾನೆದ್ದು
ರುದ್ರಕಾಳಿಯ ವಾಹನ ಉದರವ್ಯಾಘ್ರ.

ಹಸಿವಿನಿದಿರು ಶಾಂತಿಮಂತ್ರ ಪಠಿಸದಿರಿ ಪುರೋಹಿತರೆ
ಹಸಿವಿನ ಬಳಿ ಬಂಡಸಾಲೆ ಹೂಡದಿರು ವ್ಯಾಪಾರಿ
ಹಸಿವಿನ ನೆರೆಯಲ್ಲಿ ಕವಿತೆಯೋದದಿರಿ ಕವಿಗಳೇ
ಹಸಿವಿನಾರಣ್ಯದಲಿ ಆಶ್ರಮ ಕಲ್ಪಿಸದಿರಿ ಋಷಿಗಳೇ
ಹಸಿವಿನ ಬಟ್ಟಲಿಗೆ ಸ್ವರ್ಗಭಕ್ಷವನು ಇಕ್ಕಬೇಡಿ
ಹಸಿವಿಗೆ ತೋರಬೇಡಿ ನರಕದ ಬಡ್ಡು ಬಾಳು
ಹಸಿವಿಗೆ ಕಣ್ಣಿಲ್ಲ ಹಸಿವಿಗೆ ಕಿವಿಯಿಲ್ಲ
ಹಸಿವಿಗೆ ಕರುಳಿಲ್ಲ ಹಸಿವಿಗೆ ತಲೆಯೂ ಇಲ್ಲ
ಹಸಿವಿಗೆ ನಿನ್ನೆಯಿಲ್ಲ, ಹಸಿವಿಗೆ ನಾಳೆಯೂ ಇಲ್ಲ
ಹಸಿವಿಗೆ ಸಂಜೆಯಿಲ್ಲ, ಹಸಿವಿಗಿರುವುದು 'ಈಗ' ಮಾತ್ರ!
ಹಸಿವಿನ ಕಣ್ಣು, ಕಿವಿ, ತಲೆ ಎಲ್ಲ ಹೊಟ್ಟೆ ಮಾತ್ರ
ಹೊಟ್ಟೆ ಕಡಲನ್ನು ಕಡೆದರೆ ಹುಟ್ಟುವುದು ನಂಜು ಮಾತ್ರ
ಈ ನಂಜನ್ನು ನುಂಗಲು ನಂಜುಂಡನೂ ಬೆದರುತ್ತಾನೆ
ಕೈಲಾಸ ವೈಕುಂಠ ಭಸ್ಮಗೈದೀತು ಈ ನಂಜು.
ಬಂಗಾರದ ಹೆಂಚಿನ ಮನೆಯವರೆ ಕೇಳಿ
ಬಂಗಾರ ಕಣ್ಣಿನವನನ್ನು ನುಗ್ಗುನುರಿ ಮಾಡಿದ್ದು
ಬೇರೇನೂ ಅಲ್ಲ, ಹಸಿವೆಯ ಕಾಡಹಂದಿ.
ಬಂಗಾರದ ಕವಚದವರೇ ಕಿವಿಗೊಡಿ
ಬಂಗಾರ ಉಂಬವನ ಸಿಗಿದವನು ಹಸಿವೆಂಬ ನರಸಿಂಹ
ಬಂಗಾರದೇಣಿಯಲಿ ನಾಕದ ಕೋಟೆಗೇರುವವರೆ
ನೂರು ಯಜ್ಞದಾತನನ್ನು ತುಳಿದ ಮೂರು ಹೆಜ್ಜೆಯಾತ
ಮೂರು ಮೆಣಸಿನಕಾಯಿಯಷ್ಟಿದ್ದ ಹಸಿವೆಯಾತ,
ಹಸಿವೆ ಉಪ್ಪಿನಕಾಯೆಂದು ತಿಳಿಯುವ ಹಿರಿಹೊಟ್ಟೆಯವರೆ,
ಹಸಿವೇ ಅನ್ನವಾದವರ ನಾಲಗೆ ಹೊರಳುತ್ತಿದೆ ಜೋಕೆ!

- ಪಾ. ವೆಂ. ಆಚಾರ್ಯ

ವಿಚಾರ ದೀಪ್ತಿ

'ಏಸು ಒಬ್ಬನೇ ಪರಮಾತ್ಮನ ಅವತಾರ ಪುತ್ರ, ಅವನನ್ನು ನಂಬಿದವರಿಗೆ ಮಾತ್ರವೇ ಅಮೃತತ್ವ ದೊರೆಯುತ್ತದೆ' – ಎಂಬುದನ್ನು ನಂಬುವುದು ನನ್ನಿಂದ ಸಾಧ್ಯವಿರಲಿಲ್ಲ. ದೇವರಿಗೆ ಮಕ್ಕಳು ಇರುವುದಾದರೆ ನಾವೆಲ್ಲ ಅವನ ಮಕ್ಕಳೇ. ಏಸುವು ದೇವರ ಹಾಗೆ ಇದ್ದಾನೆ ಅಥವಾ ಅವನೇ ದೇವರು ಎಂದು ಹೇಳುವುದಾದರೆ, ಮನುಷ್ಯರೆಲ್ಲ ದೇವರಂತೆ ಇದ್ದಾರೆ, ಅಥವಾ ಅವರೆಲ್ಲ ದೇವರು ಎನ್ನಬಹುದು. ಏಸುವು ತನ್ನ ಮರಣದಿಂದಲೂ ರಕ್ತವನ್ನು ಚೆಲ್ಲಿಯೂ ಪ್ರಪಂಚದ ಪಾಪವನ್ನೆಲ್ಲ ಪರಿಹಾರ ಮಾಡಿದನೆಂಬ ಮಾತನ್ನು ಅಕ್ಷರಶಃ ನಂಬಲು ನನ್ನ ವಿವೇಕ ಬುದ್ಧಿ ಒಪ್ಪಲಿಲ್ಲ. ಇದನ್ನು ರೂಪಾಲಂಕಾರವಾಗಿ ಪರಿಗಣಿಸಿದರೆ, ಸ್ವಲ್ಪ ಸತ್ಯ ಇರಬಹುದು. ಎರಡನೆಯದಾಗಿ, ಕ್ರೈಸ್ತಮತಕ್ಕನುಸಾರವಾಗಿ, ಮನುಷ್ಯರಿಗೆ ಮಾತ್ರ ಆತ್ಮವುಂಟು; ಉಳಿದ ಪ್ರಾಣಿಗಳಿಗೆ ಇಲ್ಲ, ಅವುಗಳ ಮರಣದೊಂದಿಗೆ ಅವುಗಳು ಸರ್ವಥಾ ನಾಶವಾಗುತ್ತವೆ. ನನ್ನ ನಂಬಿಕೆ ಇದಕ್ಕೆ ವಿರುದ್ಧವಾಗಿದ್ದಿತು. ಏಸುವು ತ್ಯಾಗಿ, ಮಹಾತ್ಮ, ದೈವಾಂಶಪುರುಷ, ಧರ್ಮೋಪದೇಶಕ, ಹುತಾತ್ಮನೆಂದು ಒಪ್ಪಲು ನಾನು ಸಿದ್ಧನಾಗಿದ್ದೆನು. ಆದರೆ ಆತನ ಸೃಷ್ಟಿಯಲ್ಲಿ ಸರ್ವೋತ್ತಮನೆಂದು ಒಪ್ಪಲು ನಾನು ಸಿದ್ಧನಿರಲಿಲ್ಲ. ಆತನು ಶಿಲುಬೆಯ ಮೇಲೆ ಮೃತ್ಯುವನ್ನು ಹೊಂದಿದುದು ಪ್ರಪಂಚಕ್ಕೆ ಒಂದು ದೊಡ್ಡ ಆದರ್ಶ. ಅದರಲ್ಲಿ ಗುಪ್ತವಾದ ರಹಸ್ಯ ಚಮತ್ಕಾರವಾಗಲಿ ಪವಾಡವಾಗಲಿ ಇದ್ದಿತೆಂಬುದನ್ನು ನನ್ನ ಹೃದಯ ಒಪ್ಪಲಿಲ್ಲ. ಇತರ ಧರ್ಮಾವಲಂಬಿ ಸಾಧುಸಂತರ ಪವಿತ್ರಜೀವನದಲ್ಲಿ ದೊರಕದಿದ್ದ ಯಾವ ಮಹತ್ವವೂ ಕ್ರೈಸ್ತಧರ್ಮದ ಪವಿತ್ರ ಜೀವಿಗಳಿಂದ ನನಗೆ ದೊರಕಲಿಲ್ಲ. ಕ್ರೈಸ್ತರಲ್ಲಿ, ಭಗವಂತನ ಕೃಪೆಯಿಂದ ಉಂಟಾಗುತ್ತಿದ್ದ ಪರಿವರ್ತನೆ, ಇತರ ಧರ್ಮಾನುಯಾಯಿಗಳಲ್ಲಿಯೂ ಭಗವಂತನ ಕೃಪೆಯಿಂದ ಉಂಟಾಗುತ್ತಿದ್ದುದು ನನಗೆ ಗೊತ್ತಿದ್ದಿತು. ಸಿದ್ಧಾಂತದ ದೃಷ್ಟಿಯಿಂದ ನೋಡಿದರೂ, ನನಗೆ ಕ್ರೈಸ್ತಸಿದ್ಧಾಂತದಲ್ಲಿ ಯಾವ ಅಲೌಕಿಕತೆಯೂ ಕಾಣಬರಲಿಲ್ಲ. ತ್ಯಾಗದೃಷ್ಟಿಯಿಂದ ನೋಡಿದರೆ ಹಿಂದೂ ಧರ್ಮಾನುಯಾಯಿಯ ತ್ಯಾಗ, ಕ್ರೈಸ್ತರನ್ನು ಮೀರಿಸಿದುದಾಗಿ ನನಗೆ ತೋರಿತು. ಕ್ರೈಸ್ತಧರ್ಮ ಸಂಪೂರ್ಣ ಧರ್ಮವೆಂದಾಗಲಿ ಸರ್ವೋತ್ಕೃಷ್ಟ ಧರ್ಮವೆಂದಾಗಲಿ ಪರಿಗಣಿಸುವುದು ನನ್ನಿಂದ ಸಾಧ್ಯವಾಗಲಿಲ್ಲ.

ನಾನು ಕ್ರೈಸ್ತಮತವನ್ನು, ಅದು ಸಂಪೂರ್ಣ ಮತ, ಅತ್ಯುತ್ತಮ ಮತ ಎಂದು ನಂಬಲು ಹೇಗೆ ಸಾಧ್ಯವಾಗಲಿಲ್ಲವೋ, ಹಾಗೆಯೇ ಹಿಂದೂಧರ್ಮವೂ ಅಂತಹ ಧರ್ಮವೆಂದು ನಂಬಲಾಗಲಿಲ್ಲ. ಹಿಂದೂಧರ್ಮದ ದೋಷಗಳು ನನಗೆ ಎದ್ದು ಕಾಣುತ್ತಿದ್ದವು. ಒಂದು ವೇಳೆ ಅಸ್ಪೃಶ್ಯತೆ ಹಿಂದೂಧರ್ಮದ ಭಾಗವಾಗಿದ್ದರೆ, ಅದೊಂದು ಕೊಳೆತ ಅಥವಾ ಅನಾವಶ್ಯಕವಾದ ಭಾಗ. ಹಿಂದೂಗಳಲ್ಲಿ ಅಸಂಖ್ಯಾತ ಸಂಪ್ರದಾಯಗಳೂ ಜಾತಿಗಳೂ ಏಕೆ ಇವೆ ಎಂಬುದು ನನಗೆ ಅರ್ಥವಾಗಲಿಲ್ಲ. ವೇದಗಳು ಈಶ್ವರನ ವಾಕ್ಕು, ಅವನಿಂದಲೇ ಪ್ರಣೀತ, ಎಂದು ಹೇಳುವುದರ ಅರ್ಥವೇನು? ವೇದವು ಈಶ್ವರ ಪ್ರಣೀತವಾದರೆ ಕೊರಾನ್ ಏಕೆ ಅಲ್ಲ? ಬೈಬಲ್ ಏಕೆ ಅಲ್ಲ?

– ಮೊ.ಕ. ಗಾಂಧೀ (ಸಾಭಾರ : ಆತ್ಮಕಥೆ)

ಅಭಿವೃದ್ಧಿಯ ನೀತಿಯಾಗಿ ಸರ್ವೋದಯ

– ಸುರೇಂದ್ರ ಕೌಲಗಿ

ಇಂದು ದಶದಿಕ್ಕುಗಳಲ್ಲೂ ಅಭಿವೃದ್ಧಿಯ ಉದ್ಘೋಷವೇ ಕೇಳಿಬರುತ್ತಿದೆ. ಈ ಉದ್ಘೋಷ ಕೇವಲ ಭೂಲೋಕದಲ್ಲಿ ಸಾಲದೆಂದು ಅದನ್ನು ಚಂದ್ರಲೋಕ, ಮಂಗಳ ಲೋಕಗಳವರೆಗೂ ತೆಗೆದುಕೊಂಡು ಹೋಗಲಾಗುತ್ತಿದೆ. ಇನ್ನುಳಿದ ಗ್ರಹಗಳತ್ತಲೂ ಈ ಉದ್ಘೋಷ ಮೊಳಗುತ್ತ ಸಾಗಿದರೆ ಅದರಲ್ಲೇನೂ ಆಶ್ಚರ್ಯವಿಲ್ಲ.

ಇತ್ತೀಚೆಗೆ ತಾನೆ ಚುನಾವಣೆ ಮುಗಿದು ಅಧಿಕಾರಕ್ಕೆ ಬಂದಿರುವ ರಾಜ್ಯದ ನೂತನ ಮುಖ್ಯಮಂತ್ರಿಯವರು ತಮ್ಮ ಸರ್ಕಾರದ ಮಂತ್ರ ಅಭಿವೃದ್ಧಿಯೆಂದೇ ಹೇಳಿದ್ದಾರೆ. ಅವರಿಗೆ ಈ ಮಂತ್ರ ದೊರೆತದ್ದು ಗುಜರಾತಿನ ಮುಖ್ಯಮಂತ್ರಿಯವರಿಂದ, ಅವರಿಗೆ ಈ ಮಂತ್ರ ದೊರೆತದ್ದು ಕೇಂದ್ರ ಸರ್ಕಾರದಿಂದ, ಕೇಂದ್ರ ಸರ್ಕಾರಕ್ಕೆ ಈ ಮಂತ್ರ ದೊರೆತದ್ದು ಚೀಣಾದಿಂದ, ಚೀಣಾಕ್ಕೆ ಈ ಮಂತ್ರ ದೊರೆತದ್ದು ಅಮೇರಿಕಾದಿಂದ. ಅಮೇರಿಕಾಕ್ಕೆ ಈ ಮಂತ್ರದ ಶೋಧನೆಯಾದದ್ದು ಅದರ ಆರ್ಥಿಕ, ತಾಂತ್ರಿಕ, ಸೈನಿಕ, ರಾಜಕೀಯ ಬಲಾಧಾರಿತ ಸ್ವಾರ್ಥದ ಮನೋಭಾವದ ಮೂಲಕ! ಜಗದ್ವ್ಯಾಪಿಯಾದ ಅಭಿವೃದ್ಧಿಯ ಅಲೆ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನನ್ನೂ ಅವನ ಅಂತಸ್ತು, ವಿದ್ಯಾಭ್ಯಾಸ ಮುಂತಾದ ಯಾವುದನ್ನೂ ಲೆಕ್ಕಿಸದೆ ತಟ್ಟುತ್ತಲಿದೆ. ಯಾವಾಗ ದಶದಿಕ್ಕುಗಳಿಂದಲೂ ಅಭಿವೃದ್ಧಿಯೆಂಬ ಒಂದೇ ಶಬ್ದ ಏಕತಾನವಾಗಿ ಕೇಳಿ ಬರುತ್ತದೋ ಆಗ ಮನುಷ್ಯ ಬುದ್ಧಿವಂತನಾಗುವುದರ ಬದಲು ಬುದ್ಧಿಹೀನನಾಗುತ್ತಾನೆ. ಬುದ್ಧಿ ಹೀನನಾದ ಮನುಷ್ಯ ಎಂಥ ಹೇಯ ಕೆಲಸಕ್ಕೂ ಇಳಿಯುತ್ತಾನೆ. ಎಂಥ ವಿನಾಶಕಾರಿ ಕೃತ್ಯವನ್ನೂ ಎಸಗುತ್ತಾನೆ. ಅವನ ವಿವೇಚನಾ ರಹಿತ ಕೃತಿ ಎಷ್ಟರ ಮಟ್ಟಿಗೆ ಆತಂಕಕಾರಿಯಾಗಿರುತ್ತದೆಯೆಂದರೆ ತಾನು ನಿಂತ ಮರದ ಕೊಂಬೆಯನ್ನೇ ಕಡಿಯುತ್ತಾನೆ! ನಮ್ಮ ಭಗವದ್ಗೀತೆಯಲ್ಲಿ ಈ ಮಾತನ್ನು ಬಹು ಸೊಗಸಾಗಿ ಶತ–ಶತಮಾನಗಳ ಹಿಂದೆಯೇ ಹೇಳಿದೆ:–

ವಿಷಯ ಚಿಂತನೆಗೈಯಲು ಸಂಗ ಲಭಿಸುವುದವನಿಗೆ।
ಸಂಗದಲಿ ತಾ ಕಾಮವು ಕಾಮದಿಂದಲೇ ಕ್ರೋಧವು॥
ಇಂತು ಕ್ರೋಧದಿ ಮೋಹವು ಮೋಹದಿಂದವಿವೇಕವು।
ಅವಿವೇಕದಿಂದಲೇ ಬುದ್ಧಿ ನಶಿಸಿ ಸರ್ವನಾಶವು ತಪ್ಪದು॥

ಈಗ ಸರ್ವನಾಶದ ಕೆಲಸವನ್ನು ಮನುಷ್ಯ ಅಭಿವೃದ್ಧಿಯ ಹೆಸರಿನಲ್ಲಿ ಮಾಡುತ್ತಿದ್ದಾನೆ. ತನ್ನ ಜೀವನಕ್ಕೆ ಪೋಷಕವಾದ ಪಂಚಭೂತಗಳನ್ನೇ ನಾಶ ಮಾಡುತ್ತಿದ್ದಾನೆ. ತನ್ನ ಮೇಲೆ ವಿಷಯುಕ್ತ ಅನಿಲದ ಮಳೆಯನ್ನು ಸುರಿಸಿಕೊಳ್ಳುತ್ತಿದ್ದಾನೆ. "ಆಡಾಡ್ತ ಕಾಡಿಗೆ ಹೋದ" ಎಂಬಂತೆ ಅಭಿವೃದ್ಧಿಯ ವಿಷಯದೊಡನೆ ಚಲ್ಲಾಟವಾಡುತ್ತ ಅವನು ಈಗ ನಾಡಿನಿಂದ ಮಸಣಕ್ಕೆ ಹೋಗುತ್ತಿದ್ದಾನೆ. ತಾನು ಕೈಗೊಂಡಿರುವ ಅಭಿವೃದ್ಧಿಯ

ಒಡಲಲ್ಲೇ ತನ್ನ ಅಂತ್ಯ ಅಡಗಿದೆ ಎಂಬ ಜ್ಞಾನವೂ ಇಲ್ಲದಷ್ಟು ಅಜ್ಞಾನಿಯಾಗಿದ್ದಾನೆ. ಇತ್ತೀಚೆಗೆ ಓರ್ವ ಅಮೇರಿಕನ್ ಚಿಂತಕ ಡೇನಿಯಲ್ ಬೋಟೋರಿನ್ ತನ್ನ ಒಂದು ಲೇಖನದಲ್ಲಿ ಹೀಗೆ ಹೇಳಿದ್ದಾನೆ:-

"ಅಣು ಅಸ್ತ್ರಗಳು, ಚಂದ್ರಯಾನ, ಅಯ್‌ಪಾಡ್‌ಗಳತ್ತ ಪಯಣ, ವಿಜ್ಞಾನದ ಶಕ್ತಿಯುತ ಸಾಧನಗಳು ನಾಗರಿಕತೆಯ ಮೇಲೆ ಅಗಾಧವಾದ ಪರಿಣಾಮ ಬೀರುತ್ತವೆ. ಅವು ತಮ್ಮ ಉದರದಲ್ಲಿ ತಮ್ಮ ನಾಶದಕಾರಣಗಳನ್ನು ಹೊಂದಿರಬಹುದು. ಮುಂದಿನ ಮೂವತ್ತು ವರ್ಷಗಳಲ್ಲಿ ಕಂಪ್ಯೂಟರ್ ಆಧಾರಿತ ಮುನ್ಸೂಚನೆಗಳಲ್ಲಿ ನಮಗೆ ಆಸಕ್ತಿ ಇಲ್ಲದಾಗಬಹುದು ವಿಜ್ಞಾನದಲ್ಲಿಯೇ ನಂಬಿಕೆ ಕಳೆದು ಹೋಗಬಹುದು"

ಅಭಿವೃದ್ಧಿಗೂ-ವಿಜ್ಞಾನಕ್ಕೂ ವಿವಾಹ ಏರ್ಪಟ್ಟಾಗಿನಿಂದಲೂ ಅವುಗಳ ಸಂತತಿ ಮಾನವ ಕುಲವನ್ನು ಉದ್ಧಾರ ಮಾಡುವ ಬದಲು ಅವನತಿಯತ್ತ ಕೊಂಡೊಯ್ಯುತ್ತಿವೆ. ವಿನಾಶದ ಈ ಪ್ರಕ್ರಿಯೆಯಿಂದ ಎಚ್ಚೆತ್ತುಗೊಂಡಿರುವ ಅನೇಕ ಚಿಂತಕರು ಅನೇಕ ಉದ್ಗ್ರಂಥಗಳನ್ನು ಬರೆದು ಆಗಿಂದಾಗ್ಗೆ ಜನರನ್ನು ಎಚ್ಚರಿಸುವ ಕೆಲಸ ಮಾಡುತ್ತಿದ್ದಾರೆ. ಅಂಥ ಸಾಹಿತ್ಯದಲ್ಲಿ ಈ ಕೆಲವನ್ನು ಇಲ್ಲಿ ಸ್ಮರಿಸಿ ಕೊಳ್ಳಬಹುದು:-

1. Limits to medicine -*Ivan Illich*
2. Small is beautiful -*Schumakar*
3. One Straw Revolulion - *Masonobu Fukuoka*
4. Gandhi's Challenge to modern Science - *Prof. Sunil Sahasrabuddhe*
5. Power shift -*Alwin Tofler*
6. Third Wave -*Alwin Tofler*
7. Everyone loves good draught -*Sainath*
8. ಅಭಿವೃದ್ಧಿ ಎಂಬ ಅವನತಿ – ಆರ್.ವಿ ಚಂದ್ರಶೇಖರ್
9. ಶಾಶ್ವತ ಅರ್ಥಶಾಸ್ತ್ರ – ಜೆ.ಸಿ.ಕುಮಾರಪ್ಪ.
10. Development As Freedam _ Amarthya Sen
11. ಹಿಂದ್-ಸ್ವರಾಜ್ಯ- ಮಹಾತ್ಮಾ ಗಾಂಧೀ
12. ಅಲೆಕ್ಸಾಂಡರ್ ಸೋಲಝೆನಿಸ್ಟಿನ್ Alexander Solzhenitsyn ಸ್ಟಾಲಿನ್‌ವಾದ ಹಾಗೂ ಅಮೇರಿಕಾದ ಸಾಮ್ರಾಜ್ಯಶಾಹಿ ವಿರೋಧಿ ಚಿಂತಕ.
13. The Final Century - Sir Martin Rees ಸುಪ್ರಸಿದ್ಧ ಖಗೋಳಶಾಸ್ತ್ರಜ್ಞ
14. Creating World Without Poverty - Muhammad Yunus
15. India After Gandhi - Ramchandra Guha

ಮೇಲ್ಕಾಣಿಸಿದ ಸಾಹಿತ್ಯವಲ್ಲದೆ ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ ಅನೇಕ ಚಿಂತಕ ಅಂಕಣಕಾರರು ಅಂಕಣಗಳಲ್ಲಿ ಆಧುನಿಕ ಅಭಿವೃದ್ಧಿ ಯೋಜನೆಗಳಿಂದ, ನೀತಿಗಳಿಂದ

ಹಾಗೂ ಸಂಸ್ಕೃತಿಯಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ಎಚ್ಚರಿಸುತ್ತಲೇ ಬರುತ್ತಿದ್ದಾರೆ. ಇಲ್ಲಿ ಪ್ರಮುಖವಾಗಿ ಇರುವ ಪ್ರಶ್ನೆಗಳೇನೆಂದರೆ :-

೧. ಅಭಿವೃದ್ಧಿಯ ಉದ್ದೇಶ್ಯವೇನು,
೨. ಯಾರಿಗಾಗಿ ಅಭಿವೃದ್ಧಿ,
೩. ಏತಕ್ಕೋಸ್ಕರ ಅಭಿವೃದ್ಧಿ,
೪. ಎಲ್ಲಿಯವರೆಗೆ ಅಭಿವೃದ್ಧಿ,
೫. ಸರ್ವಕಾಲಿಕವಾಗಿ ಸರ್ವಸ್ಥಳೀಯವಾಗಿ ಅನ್ವಯಿಸುವ ಅಭಿವೃದ್ಧಿಯ ವ್ಯಾಖ್ಯೆ ಯಾವುದು?
೬. ಅಭಿವೃದ್ಧಿಗೆ ಅಗತ್ಯವಾದ ಸಂಪನ್ಮೂಲಗಳ ಪುನರ್‌ವ್ಯುತ್ಪತ್ತಿ ಹೇಗೆ?

ಮೇಲ್ಕಾಣಿಸಿದ ಪ್ರಶ್ನೆಗಳಿಗೆ ಸಮಂಜಸವಾದ ಹಾಗೂ ಸರ್ವಮಾನ್ಯವಾದ ಉತ್ತರ ಸಿಗದೆ ಇಂದು ಅಭಿವೃದ್ಧಿಯ ನೀತಿ ನಿರೂಪಕರು, ಅಭಿವೃದ್ಧಿಯೋಜಕರು, ಅಭಿವೃದ್ಧಿ ಅನುಷ್ಠಾನಕರು, ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತಿರುವ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಸ್ವತಃ ಭ್ರಮಿಷ್ಠರಾಗಿದ್ದಾರೆ. ಕೇವಲ ಕಳೆದ ಒಂದೆರಡು ಶತಮಾನಗಳ ಹಿಂದೆ ಊಹಿಸಲಾಗದಿದ್ದಕಿಂತಲೂ ಹೆಚ್ಚಿನ ರೀತಿಯಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಬದಲಾವಣೆಯನ್ನೂ, ಉನ್ನತಿಯನ್ನೂ ೨೧ನೇ ಶತಮಾನದಲ್ಲಿ ಕಾಣುತ್ತಿದ್ದೇವೆ. ಆದರೆ ಹಗಲಿನ ಹಿಂದೆ ಕತ್ತಲೆ ಬರುವಂತೆ ಎಲ್ಲ ಅಭಿವೃದ್ಧಿಗಳ ಮಧ್ಯದಲಿ ಬಡತನ, ಕಷ್ಟ-ಕಾರ್ಪಣ್ಯಗಳು, ಪ್ರಕೃತಿ ವಿಕೋಪ, ಹಿಂಸೆ, ಯುದ್ಧ ಮುಂತಾದವುಗಳು ಕಡಿಮೆಯಾಗುವುದಿರಲಿ ಅವು ಹೆಚ್ಚಾಗುತ್ತಲೇ ಇವೆ. ಪ್ರತಿಯೊಂದು ರಾಜ್ಯ ವ್ಯವಸ್ಥೆಯು ಅದರ ಸಾಧಕ-ಬಾಧಕಗಳ ಬಗ್ಗೆ ತೀಕ್ಷ್ಣ ಪ್ರಶ್ನೆಗಳಿಗೆ ಒಳಗಾಗುತ್ತಿದೆ. ಇರುವ ರಾಜ್ಯ ಪದ್ಧತಿಗಳು ತಮ್ಮ ಉಪಯುಕ್ತತೆಯನ್ನು ಕಳೆದುಕೊಂಡಿವೆ. ತತ್ವಶಾಸ್ತ್ರಗಳು ಸಿದ್ಧಾಂತಗಳು ನಿಷ್ಪ್ರಯೋಜಕವಾಗುತ್ತಲಿವೆ. ವಿಜ್ಞಾನದ ಧ್ಯೇಯೋದ್ದೇಶಗಳು ಪ್ರಶ್ನಾತೀತವಾಗಿ ಉಳಿದಿಲ್ಲ ಇಂದಿನ ಈ ವಿಚಿತ್ರ ಸನ್ನಿವೇಶವನ್ನು ನಮ್ಮೆಲ್ಲರ ನೆಚ್ಚಿನ ಚಿಂತಕ-ಸಾಹಿತಿ ಡಿವಿಜಿ ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಈ ರೀತಿ ವರ್ಣಿಸಿದ್ದಾರೆ.

ಹಳೆಯ ಭಕ್ತಿ ಶ್ರದ್ಧೆಯಳಿಸಿ ಹೋಗಿವೆ ಮಾಸಿ
ಸುಳಿದಿಲ್ಲವಾವ ಹೊಸ ದರ್ಶನದ ಹೊಳಪುಂ
ಪಳಗಿದ್ದ ಮನೆ ಬಿದ್ದ ಕುಂಟ ಕುರುಡನ ತೆರದಿ
ತಳಮಳಿಸುತಿದೆ ಲೋಕ -ಮಂಕುತಿಮ್ಮ

ಅಭಿವೃದ್ಧಿಯ ಹುಚ್ಚು ಮನುಷ್ಯನನ್ನು ಎರಡು ಮಹಾಯುದ್ಧಗಳಲ್ಲಿ ತೊಡಗಿಸಿತು, ಈಗ ಅದೇ ಹುಚ್ಚು ಮೂರನೇ ಮಹಾಯುದ್ಧಕ್ಕೆ ಕಾರಣವಾಗುವ ಎಲ್ಲ ಚಿಹ್ನೆಗಳು ದಿಗಂತದಲ್ಲಿ ಕಾಣುತ್ತಿದೆ. ಮುಂದೆ ಸಂಭವಿಸಲಿರುವ ಪ್ರತಿಯೊಂದು ಯುದ್ಧವೂ ಹಿಂದಿನ ಯುದ್ಧಕಿಂತ ಭೀಕರವಾಗಿ, ಪ್ರಳಯಾಂತಿಕವಾಗಿ ಪರಿಣಮಿಸಲಿದೆ ಎಂದು ಶಸ್ತ್ರಾಸ್ತ್ರಗಳನ್ನು ಶೋಧಿಸಿದ ವಿಜ್ಞಾನಿಗಳೇ ಹೇಳುತ್ತಾರೆ, ಸರ್ಕಾರಗಳ ಮುಖ್ಯಸ್ಥರೇ ಹೇಳುತ್ತಾರೆ. ಎರಡನೇ ಮಹಾಯುದ್ಧದ ನಾಯಕರಲ್ಲಿ ಒಬ್ಬರಾಗಿದ್ದ ವಿನಸ್ಟನ್ ಚರ್ಚಿಲ್‌ರ ಒಂದು ಹೇಳಿಕೆ ಈ

ಪ್ರಕಾರ ಇದೆ:-

"To build may have to be the slow and laborious task of years. To destroy can be thoughtless act of a single day"

ಈ ಮಾತಿಗೆ ಉದಾಹರಣೆ ಹಿರೋಷಿಮಾ ಮತ್ತು ನಾಗಸಾಕಿಯಂಥ ಪಟ್ಟಣಗಳು ಮತ್ತು ವಿಶ್ವವಾಣಿಜ್ಯ ಸಂಸ್ಥೆ ನೆಲಸಮವಾದುದು. ವಿನಾಶಕಾರಿ ವಿಜ್ಞಾನವೊಂದು ಅಗತ್ಯವಾಗಿರುವುದಕ್ಕೆ ಕಾರಣ ಎಲ್ಲ ದೇಶಗಳೂ ಅಭಿವೃದ್ಧಿಯ ಕಲ್ಪನೆಯ ಹಾರುಗುದುರೆಯನ್ನೇರಿ ಧಾವಿಸುತ್ತಿರುವುದು. ಅಭಿವೃದ್ಧಿಯ ಅಗತ್ಯ ಇಂಧನಗಳಾದ ಎಣ್ಣೆ, ನೀರು ಮತ್ತು ಇತರ ನೈಸರ್ಗಿಕ ಸಂಪನ್ಮೂಲಗಳ ಕೊರತೆಯು ಮೂರನೇ ಮಹಾಯುದ್ಧಕ್ಕೆ ಕಾರಣವಾಗಲಿದೆಯೆಂದು ತಿಳಿದೂ-ತಿಳಿದೂ ಅಭಿವೃದ್ಧಿಯೆಂಬ ಅಪ್ಸರೆ ಹೇಗೆ ಎಲ್ಲ ದೇಶಗಳು ತಮ್ಮ-ತಮ್ಮ ವೈಚಾರಿಕ ವೈಶಿಷ್ಟ್ಯತೆಯನ್ನೂ ಸಾಂಸ್ಕೃತಿಕ ಮೂಲನೆಲೆಗಳನ್ನೂ ಕಳೆದುಕೊಳ್ಳುವಂತೆ ಮಾಡಿದೆ ಎಂಬುದಕ್ಕೆ ಚೀಣಾ ದೇಶದ ಉದಾಹರಣೆ ನಮ್ಮ ಮುಂದೆ ಇದೆ. ಚೀಣಾ ಮೂಲತಃ ಕಮುನಿಸ್ಟ್ ರಾಷ್ಟ್ರ. ಕಮ್ಯೂನಿಸಂ ಸಿದ್ಧಾಂತವನ್ನು ತನ್ನ ರಾಜ್ಯಶಕ್ತಿಯಲ್ಲಿ ಅಳವಡಿಸಿಕೊಳ್ಳಲು ಎಂಥೆಲ್ಲ ಹೋರಾಟಗಳನ್ನು ಅದು ನಡೆಸಿತು, ಎಷ್ಟೊಂದು ಅಪಾರ ಜನಸಂಖ್ಯೆ ಬದುಕು-ಸಾವುಗಳ ನಡುವೆ ಉಸಿರಾಡಿತೆಂಬುದು ಈಗ ಜಗತ್ತಿಗೆಲ್ಲ ಗೊತ್ತಿರುವ ವಿಷಯ. ಅಂಥ ಬಿಗಿ ನಿಲುವಿನ ಚೀಣಾ ಇಂದು ಅಭಿವೃದ್ಧಿಯ ವಿಚಾರ ಹೊತ್ತುಕೊಂಡು ಅಮೇರಿಕಾವನ್ನು ಹಿಂದೆ ಹಾಕಿ ತಾನೊಂದು ವಿಶ್ವಶಕ್ತಿಯಾಗಿ ಹೊರಹೊಮ್ಮ ಬೇಕೆಂಬ ಹುಮ್ಮಸ್ಸಿನಲ್ಲಿ, ಪ್ರಯತ್ನದಲ್ಲಿ ತಾನೇ ಒಂದು ಶಕ್ತಿಶಾಲಿ ಬಂಡವಾಳಶಾಹಿ ದೇಶವಾಗಿ ರೂಪಾಂತರಗೊಳ್ಳುತ್ತಿದೆ! ಹಾಗೆ ರೂಪಾಂತರಗೊಳ್ಳುವ ಮೂಲಕ ಅಮೆರಿಕ ಮತ್ತು ಇನ್ನಿತರ ಪಾಶ್ಚಿಮಾತ್ಯ ಬಂಡವಾಳಶಾಹಿ ದೇಶಗಳಿಗೆ ರಕ್ಷಣೆ ಕೊಡುತ್ತಿದೆ ಎಂಬ ಸತ್ಯ ಸಂಗತಿಯನ್ನೆ ಚೀಣಾ ಮರೆಯುತ್ತಿದೆ. ಚೀಣಾ ಕೂಡಾ ಅಭಿವೃದ್ಧಿಯ ಆಸೆಯಿಂದ ಪ್ರಪಂಚದಲ್ಲಿ ತನ್ನ ಸಾಮ್ರಾಜ್ಯದ ಕನಸನ್ನ ಕಾಣುತ್ತಿದೆ. ಅದಕ್ಕಾಗಿ ಪ್ರಯತ್ನಿಸುತ್ತಲೂ ಇದೆ. ಅದರ ಭೂ ದಾಹದ ಕಣ್ಣುಗಳು ಟಿಬೇಟಿನ ಮೇಲೂ, ಭಾರತದ ನೈರುತ್ಯರಾಜ್ಯಗಳ ಮೇಲೂ ಬಿದ್ದಿದೆ. ಟೈವಾನವನ್ನು ನುಂಗಿಹಾಕಲು ಹೊಂಚು ಹಾಕಿಕೊಂಡೇ ಕುಳಿತಿದೆ. ತನ್ನ ದೇಶದ ಚಿಂತಕರಾದ ಸಾಕ್ರೆಟಿಸ್, ಪ್ಲೇಟೋ ಮತ್ತು ತಾವೋರವರ ರಾಜಕೀಯ ಸಿದ್ಧಾಂತಗಳಿಗೆ ತಿಲಾಂಜಲಿಕೊಟ್ಟಿದೆ. ಚೀಣಾದ ಈ ಪರಿವರ್ತನೆಗೆ ಅಭಿವೃದ್ಧಿಯ ಹುಚ್ಚೇ ಕಾರಣ. ಚೀಣಾ ನಮಗೆ ಆದರ್ಶ ದೇಶವಾಗಲಾರದು. ನಮ್ಮದು ಪ್ರಜಾಪ್ರಭುತ್ವ ದೇಶ. ಚೀಣಾ ಕಮ್ಯುನಿಸ್ಟ್ ಪಕ್ಷದ ಸರ್ವಾಧಿಕಾರದಲ್ಲಿರುವ ದೇಶ. ಅಲ್ಲಿ ಲಕ್ಷಾಂತರ ಜನರು ತಮ್ಮ ವಿಚಾರದ ಸ್ವಾತಂತ್ರ್ಯಕ್ಕಾಗಿ ಕಾರಾಗೃಹದಲ್ಲಿದ್ದಾರೆ. ಅಲ್ಲದೆ ಅದರ ಆರ್ಥಿಕನೀತಿ ಪಾಶ್ಚಿಮಾತ್ಯ ದೇಶಗಳನ್ನೇ ಹೋಲುತ್ತದೆ. ಅಷ್ಟೇ ಅಲ್ಲ ಇನ್ನೂ ಸ್ಟಾಲಿನ್ ಕಂಡ ಆಡಳಿತ ರೀತಿ ನೀತಿಗಳನ್ನೇ ಅನುಸರಿಸುತ್ತಿದೆ.

ಇಂಥದೇ ಇನ್ನೊಂದು ಉದಾಹರಣೆ ನಮ್ಮ ಭಾರತವೇ ಆಗಿದೆ. ಜಗತ್ತಿನ ಅತ್ಯಂತ ಪ್ರಚೀನ ಸಾಹಿತ್ಯವಾದ ವೇದಗಳು, ಉಪನಿಷತ್ತುಗಳು ಆರಣ್ಯಕಗಳು ಭಾರತದ ಸಂಸ್ಕೃತಿಯನ್ನು ಬೆಳೆಸಿವೆ ಮತ್ತು ಬೆಳಗಿಸಿವೆ. ಅವುಗಳಲ್ಲಿಯ ಅನೇಕ ಮಂತ್ರಗಳು

ಸಹಜೀವನದ ವೈಭವವನ್ನೂ, ಜೀವನದ ಅಖಂಡತೆಯ ನಿತ್ಯೋತ್ಸವವನ್ನೂ ಹಾಡುತ್ತವೆ. ಸಮಸ್ತ ಮಾನವ ಕುಲೋದ್ಧಾರಕ ಮಂತ್ರಗಳಿಂದ ತುಂಬಿದ ಉಪನಿಷತ್ತುಗಳ ದೇಶವಾದ ಭಾರತವೂ ಕೂಡ ಅಭಿವೃದ್ಧಿಯ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಜನ್ಮ ಕೊಟ್ಟಿದೆ. ಆ ಕಂಪನಿಗಳು ಹಿಂದುಳಿದ ದೇಶಗಳಿಗೆ ಹೋಗಿ ಅಲ್ಲಿಯ ಆರ್ಥಿಕ ಹಿಂದುಳಿದಿರುವಿಕೆಯ ಲಾಭ ಪಡೆದು ತಮ್ಮ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳುತ್ತಿವೆ. ಜಗತ್ತಿನ ಶ್ರೀಮಂತ ಕಂಪನಿಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳುತ್ತಿವೆ; ಆ ಕಂಪನಿಗಳ ಮಾಲಿಕರು ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಗಳ ಪಟ್ಟಿಯಲ್ಲಿ ಮೇಲಿನ ಸ್ಥಾನಗಳನ್ನು ಪಡೆಯುತ್ತಿದ್ದಾರೆ. ಹೀಗೆ ಸಣ್ಣ ಮೀನುಗಳನ್ನು ತಿಂದು ಬದುಕುವ ದೊಡ್ಡ ಮೀನು ಆಗುತ್ತಿದೆ ಭಾರತ ದೇಶ. ಭಾರತವೂ ಇಂಗ್ಲೆಂಡ್ ಮತ್ತು ಅಮೇರಿಕಾ ಆಗಲು ಬಯಸಿದರೆ ಶೋಷಣೆಗಾಗಿ ಜಗತ್ತಿಲ್ಲಿ ಬೇರೆ ಬೇರೆ ಜನಾಂಗಗಳನ್ನೂ ಸ್ಥಳಗಳನ್ನೂ ಹುಡುಕಬೇಕಾಗುತ್ತದೆಂದು ಗಾಂಧೀಜಿ ಹೇಳಿದ್ದ ಮಾತು ನಿಜವಾಗುತ್ತಿದೆ. ತನ್ನ ಸಂಸ್ಕೃತಿಯು ಜಗತ್ತಿಗೆ ಕೊಡಬಹುದಾದ ಸಂದೇಶವನ್ನು ಮರೆತು ಆ ಸಂದೇಶವನ್ನು ನಿರಸನಗೊಳಿಸುವ ಅಭಿವೃದ್ಧಿಯ ಹಿಂದೆ ಓಡುತ್ತಿದೆ. ತನ್ನನ್ನು ತಾನು ಅಮೇರಿಕೀಕರಣ ಗೊಳಿಸಿಕೊಳ್ಳುತ್ತಿದೆ. ಅಭಿವೃದ್ಧಿಯೆಂಬುದರ ಅರ್ಥವೇ ಅಮೇರಿಕೀಕರಣವಾಗಿದೆ. ಅಮೇರಿಕೀಕರಣವೆಂದರೆ ಭೋಗ ಜೀವನ, ಈ ಪ್ರಕಾರದ ಭೋಗ ಜೀವನದ ಅಳತೆಗಳು ಜಿಡಿಪಿ ಮತ್ತು ಸ್ಟಾಕ್ ಎಕ್ಸ್‌ಚೇಂಜಗಳಲ್ಲಿ ಕಂಡುಬರುವ ದಿನನಿತ್ಯದ ಏರಿಳಿತಗಳು ಮತ್ತು ದೇಶದ ಹಣದುಬ್ಬರದ ಪ್ರಮಾಣ: ಈ ಮೂರೂ ನೇರವಾಗಿ ದೇಶದ ಸಾಮಾನ್ಯ ಜನರ ಉತ್ಪಾದನಾ ಶಕ್ತಿಯನ್ನೂ, ಅವರ ಜೀವನ ಶೈಲಿಯನ್ನೂ ಅವರ ಆರ್ಥಿಕ ಶಕ್ತಿಯನ್ನೂ ಅವಲಂಬಿಸಿವೆ. ಈ ಮೂರೂ ಪುನಃ ಸರ್ಕಾರದ ಅಭಿವೃದ್ಧಿ ನೀತಿಯನ್ನು ಅವಲಂಬಿಸಿದೆ. ಸರ್ಕಾರಗಳ ಅಭಿವೃದ್ಧಿ ನೀತಿ ಜಗತ್ತಿನ ಒಟ್ಟಾರೆ ಆರ್ಥಿಕ ನೀತಿಯಿಂದ ಪ್ರಭಾವಿತಗೊಂಡಿರುತ್ತದೆ. ಈ ಮಾತಿನ ಅನುಭವ ಇಂದು ಎಲ್ಲರಿಗೂ ವೇದ್ಯವಾಗುತ್ತಿದೆ ಜಗತ್ತಿನಲ್ಲಿ ತೈಲೋತ್ಪಾದನೆ ಹೆಚ್ಚಾದಾಗ ಜಿಡಿಪಿ ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವರ್ತನೆ ಹಾಗೂ ಜನರ ಜೀವನಶೈಲಿಯೇ ಒಂದು ತೆರನಾಗಿದ್ದರೆ, ಅದೇ ತೈಲೋತ್ಪದನೆ ಕಡಿಮೆಯಾದಾಗ ಇನ್ನೊಂದು ತೆರನಾಗಿರುತ್ತದೆ. ಇವುಗಳ ಒಟ್ಟು ಪರಿಣಾಮ ದೇಶದ ಅಭಿವೃದ್ಧಿ ಗುರಿಯ ಮೇಲೆ ಆಗುತ್ತದೆ. ಅಭಿವೃದ್ಧಿಯ ಗುರಿಯನ್ನು ಶೇಕಡಾ ೮ ಕ್ಕೆ ಇಡಬೇಕೆ ಅಥವಾ ಶೇಕಡಾ ೯ ಕ್ಕೆ ಇಡಬೇಕೆ ಎಂಬ ವಿಷಯದಲ್ಲಿ ಸ್ಥಿರವಾದ ನಿರ್ಣಯ ತೆಗೆದುಕೊಳಲು ಸಾಧ್ಯವಾಗುವುದಿಲ್ಲ. ಆಗ ಸಹಜವಾಗಿಯೇ ಅಭಿವೃದ್ಧಿಯ ವೇಗದಲ್ಲಿಯ ಏರಿಳಿತ ಸಮಸ್ತ ಜೀವನದ ಮೇಲೆ ಆಗದೆ ಇರುವುದಿಲ್ಲ. ಅನೇಕ ಸಲ ಈ ಏರಿಳಿತ ಭಾರತದ ಕೋಸಿ ನದಿಯಂತೆ ಕಣ್ಣೀರಿನ ನದಿಯಾಗಿ ಪರಿಣಮಿಸುತ್ತದೆ. ಆ ನದಿ ಮಳೆಗಾಲದಲ್ಲಿ ಅನಿಯಂತ್ರಿತ ಹುಚ್ಚು ಹೊಳೆಯಾಗಿ ಹರಿದು ಏನೆಲ್ಲ ಸಾವು ನೋವುಗಳನ್ನು, ನಷ್ಟವನ್ನು ಉಂಟುಮಾಡುತ್ತದೆ. ಈಗ ನಮ್ಮ ದೇಶ ಅಂಥದೇ ಅಭಿವೃದ್ಧಿಯ ವೇಗದಲ್ಲಿಯ ಅನಿಯಂತ್ರಿತ ಏರಿಳಿತದ ಪರಿಣಾಮವನ್ನು ಅನುಭವಿಸುತ್ತಿದೆ. ಸಾರಿಗೆ–ಸಂಪರ್ಕಗಳಿಗೆ, ಯಾತಾ ಯಾತಗಳಿಗೆ ಅಗತ್ಯವಾದ ಇಂಧನದ ಕೊರತೆಯಾಗಿದೆ, ಜೀವನಾವಶ್ಯಕವಾದ ಪದಾರ್ಥಗಳ ಬೆಲೆ

ಜನಸಾಮಾನ್ಯರ ವಾರ್ಷಿಕ ತಲಾ ಆದಾಯದ ಮೇರೆಯನ್ನು ಮೀರಿದುದು ಒಂದು ಕಡೆಯಾದರೆ, ಈ ಪದಾರ್ಥಗಳನ್ನು ಉತ್ಪಾದಿಸುವ ರೈತರು ತಮ್ಮ ಬೆಳೆಗಳಿಗೆ ಯೊಗ್ಯ ಬೆಲೆದೊರೆಯುವುದಿಲ್ಲವೆಂದು ದಿನಬೆಳಗಾದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆತ್ಮಹತ್ಯೆ ಪ್ರಕರಣಗಳ ಬಗ್ಗೆ ವಿಪುಲವಾದ ಲೇಖನಗಳು, ಪುಸ್ತಕಗಳು ಅಂಕಿ-ಸಂಖ್ಯೆಗಳ ಸಮೇತ, ಕಾರಣಗಳ ಸಮೇತ ಬರುತ್ತಲೇ ಇವೆ. ಆದರೂ ಕೂಡ ಕೇಂದ್ರ ಸರ್ಕಾರಕ್ಕಾಗಲೀ, ರಾಜ್ಯ ಸರ್ಕಾರಗಳಿಗಾಗಲಿ ಆತ್ಮಹತ್ಯಾ ಪ್ರಕರಣಗಳನ್ನು ನಿಲ್ಲಿಸಲು ಸಾಧ್ಯವಾಗುತ್ತಿಲ್ಲ. ದೇಶದ ಕೈಗಾರಿಕೆಗಳಂತೂ ಈ ಆತ್ಮಹತ್ಯೆಗಳಿಗೂ ತಮಗೂ ಏನೂ ಸಂಬಂಧವಿಲ್ಲದಂತೆ ಇವೆ. ಈ ಪರಿಸ್ಥಿತಿ ಎಂಥ ವಿಕೋಪಕ್ಕೆ ಹೋಗಿದೆಯೆಂದರೆ ದೇಶದ ಜಿಡಿಪಿಯ ವೃದ್ಧಿ ಮತ್ತು ಆತ್ಮಹತ್ಯೆಗಳ ಮಧ್ಯ ಪೈಪೋಟಿ ಪ್ರಾರಂಭವಾಗಿದೆ. ಈ ಪೈಪೋಟಿಯಲ್ಲಿ ರೈತರ ಆತ್ಮಹತ್ಯೆಗಳ ಪ್ರಕ್ರಿಯೆಯೇ ಗೆಲ್ಲುವಂತಾಗಿದೆ. ಹಣದುಬ್ಬರ ಶೇಕಡ ೧೨ ದಾಟಿದೆ. ತತ್ಪರಿಣಾಮವಾಗಿ ಆಡಳಿತದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ, ಅದಕ್ಷತೆ ಹೆಚ್ಚಾಗಿದೆ. ಸರ್ಕಾರದ ಯಾವ ಜನಪರ ಯೋಜನೆಗಳೂ ಫಲದಾಯಕವಾಗಿ ಜಾರಿಗೆ ಬರುತ್ತಿಲ್ಲ. ದೇಶದ ಅಭಿವೃದ್ಧಿಗೆ ಅಗತ್ಯವಾದ ಶಿಕ್ಷಣವೇ ಹೇಳಲಾಗದಷ್ಟು ದುಬಾರಿಯಾಗಿದೆ.

ಅಭಿವೃದ್ಧಿಗೆ ಅಗತ್ಯವಾದ ಇನ್ನೊಂದು ಮಹತ್ವದ ಅಂಶ ಆರೋಗ್ಯಸೇವೆಯೂ ಜನಸಾಮಾನ್ಯರ ಆದಾಯದ ಮಿತಿಯ ಹೊರಗೇ ಇದೆ. ಇವೆಲ್ಲವೂ ಈಗಿನ ಅಭಿವೃದ್ಧಿ ನೀತಿಯ ವಿರೋಧಾತ್ಮಕ ಪರಿಣಾಮಗಳು. ಅಲ್ಲದೆ, ಅಮರ್ತ್ಯಸೇನ್‌ರೇ ಹೇಳಿದಂತೆ ಅಭಿವೃದ್ಧಿಯ ಬೆಳವಣಿಗೆ ಸಮಾನವಾಗಿ ಆಗದಿದ್ದರೆ ಒಂದು ಪ್ರದೇಶದಲ್ಲಿ ಕ್ಯಾಲಿಫೋರ್ನಿಯಾದ ಜೀವನಮಟ್ಟವಿದ್ದರೆ, ಇನ್ನೊಂದು ಕಡೆಗೆ ಸಬ್-ಸಹಾರಾ ಆಫ್ರಿಕಾದಂತೆ ಇರುವುದು.

ಅಭಿವೃದ್ಧಿಯ ಮನೋಭಾವ ದೇಶದ ಆಂತರಿಕ ರಾಜಕಾರಣದ ಮೇಲೂ ತನ್ನ ಹಿಡಿತ ಸಾಧಿಸಿದೆ. ದೇಶದ ಎಲ್ಲ ರಾಜ್ಯಗಳಲ್ಲಿ ಅಭಿವೃದ್ಧಿಗಾಗಿ ಪರಸ್ಪರ ಪೈಪೋಟಿ ನಡೆದಿದೆ. ಕೇಂದ್ರ ಸರ್ಕಾರದಿಂದ ಹೆಚ್ಚು-ಹೆಚ್ಚು ಹಣ ಪಡೆಯುವುದೇ ಪ್ರತಿಯೊಂದು ರಾಜ್ಯ ಸರ್ಕಾರದ ಹೆಬ್ಬಯಕೆಯಾಗಿರುತ್ತದೆ. ಅನೇಕ ಸಲ ರಾಜ್ಯಗಳು ತಮ್ಮ ರಾಜಕೀಯ ಶಕ್ತಿಯನ್ನು ಉಪಯೋಗಿಸಿಕೊಂಡು ಕೇಂದ್ರ ಸರ್ಕಾರದ ಕೈ ತಿರುಚಿಯೋ, ಉಸಿರುಗಟ್ಟುವಂತೆ ಅದರ ಮೂಗನ್ನು ಹಿಡಿದೋ ತಮ್ಮ ರಾಜ್ಯದ ಅಭಿವೃದ್ಧಿಗೆ ಹೆಚ್ಚು ಹಣ ಪಡೆಯುವಲ್ಲಿ ಯಶಸ್ವಿಯಾಗುತ್ತವೆ. ಹಿಮಾಲಯದ ತಪ್ಪಲಲ್ಲಿರುವ ನೈರುತ್ಯ ರಾಜ್ಯಗಳನ್ನು ಮತ್ತು ಜಮ್ಮು-ಕಾಶ್ಮೀರ ರಾಜ್ಯವನ್ನು ಭಾರತದ ಒಕ್ಕೂಟದಲ್ಲಿ ಹಿಡಿದಿಡಲು ಅವುಗಳ ಅಭಿವೃದ್ಧಿಯನ್ನೇ ಒಂದು ಸಾಧನವನ್ನಾಗಿ ಮಾಡಿಕೊಳ್ಳಲಾಗಿದೆ. ಇನ್ನು ಭಾರತೀಯ ಭಾಷೆಗಳು ಶಾಸ್ತ್ರಿಯ ಸ್ಥಾನ ಪಡೆಯಬೇಕೆಂಬ ಮಹದಿಚ್ಛೆಗೆ ಸಾಹಿತ್ಯಕ ಅಂಶಗಳಿಗಿಂತ ಶಾಸ್ತ್ರಿಯ ಸ್ಥಾನ ದೊರೆಯುವುದರಿಂದ ಸಿಗುವ ಬೃಹತ್ ಪ್ರಮಾಣದ ಹಣದ ಚೀಲದ ಮೇಲೆಯೇ ಕಣ್ಣು ಇರುತ್ತದೆ. ಹಾಗೆ ಸಿಗುವ ಹಣದ ಬಲದಿಂದ ತಮ್ಮ-ತಮ್ಮ ಭಾಷಾ ಸಾಹಿತ್ಯ ಸಿರಿವಂತಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಬಹುದೆಂಬ ಭ್ರಾಂತಿಯಲ್ಲಿ ಭಾಷಾಭಿಮಾನಿಗಳು ಸಿಕ್ಕಿಹಾಕಿಕೊಂಡಿದ್ದಾರೆ.

ಅಭಿವೃದ್ಧಿಯೆಂಬುದನ್ನು ಬೇರೆ–ಬೇರೆ ಸಮಯದಲ್ಲಿ, ಬೇರೆ–ಬೇರೆ ರೀತಿಯಲ್ಲಿ, ಬೇರೆ–ಬೇರೆ ಉದ್ದೇಶ್ಯಕ್ಕಾಗಿ ಉಪಯೋಗಿಸಲ್ಪಟ್ಟಿದೆಯಾದರೂ ಹೆಚ್ಚಾಗಿ ಶೋಷಣೆಯ ಸಾಧನವಾಗಿಯೇ ಉಪಯೋಗಿಸಲ್ಪಟ್ಟಿದೆ. ಭಾರತ ದೇಶದ ಮಟ್ಟಿಗಂತೂ ಇದು ಸತ್ಯವಾಗಿದೆ. ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿಯಾಗುತ್ತಲೇ ಅದರ ಕಣ್ಣು ಭಾರತದ ಮೇಲೆ ಬಿತ್ತು. ಭಾರತ ಹಿಂದುಳಿದ ದೇಶವೆಂದು ತಿಳಿದು ಅದರ ಅಭಿವೃದ್ಧಿಯ ಹೆಸರಿನಲ್ಲಿ ಅದನ್ನು ರಕ್ತದ ಕೊನೆಯ ಹನಿಯವರೆಗೂ ಶೋಷಿಸಿ ತಾನು ಶ್ರೀಮಂತವಾಯಿತು. ದಕ್ಷಿಣ ಅಮೇರಿಕದಲ್ಲಿಯ ಬ್ರಿಟಿಷ್ ಕಾಲೋನಿಗಳ ಸ್ಥಿತಿಯೂ ಇದೇ ಆಗಿತ್ತು. ಇನ್ನೊಂದು ದೇಶವನ್ನು ಅಭಿವೃದ್ಧಿ ಪಡಿಸುವುದಾಗಿ ಅಥವಾ ಉದ್ಧಾರ ಮಾಡುವುದಾಗಿ ಹೊರಡುವ ದೇಶವು ಆ ದೇಶವನ್ನು ವಿಭಜಿಸಬೇಕಾಗುತ್ತದೆ. ಒಂದು ಇದ್ದುದನ್ನು ಎರಡು, ಎರಡು ಇದ್ದುದನ್ನು ನಾಲ್ಕು ಮಾಡದೆ ಅದರ ಸ್ವಂತ ಅಭಿವೃದ್ಧಿಯಾಗಲು ಸಾಧ್ಯವಿಲ್ಲ ಎಂಬುದು ಇತಿಹಾಸದ ಪುಟಗಳಿಂದ ಗೊತ್ತಾಗುತ್ತದೆ. ಈ ಮಾತಿಗೆ ಉದಾಹರಣೆಯಾಗಿ ಅಮೇರಿಕಾ ಮತ್ತು ಇಂಗ್ಲೆಂಡ್ ದೇಶಗಳು ಇವೆ. ಈಗ ಇಂಥ ಕೆಲಸವನ್ನು ಮಾಡಲು ಚೀಣಾ ಹೊರಟಿದೆ. ಟಿಬೇಟನ್ನು ಆಕ್ರಮಿಸಿ ನೀರು ಕುಡಿಯಿತು; ಹಿಮಾಲಯದ ತಪ್ಪಲಲ್ಲಿರುವ ನೇಪಾಳವನ್ನು ನುಂಗಲು ಹವಣಿಸುತ್ತಿದೆ. ಅಷ್ಟೇ ಅಲ್ಲ ಭಾರತದ ನೈರುತ್ಯ ದಿಕ್ಕಿನಲ್ಲಿರುವ ಅರುಣಾಚಲ ಪ್ರದೇಶ, ನಾಗಾಲ್ಯಾಂಡ್ ಮುಂತಾದ ಪ್ರದೇಶಗಳ ಮೇಲೂ ಅದರ ಗೃಧ್ರ ದೃಷ್ಟಿ ಬಿದ್ದಿದೆ. ಇದಕ್ಕೆ ಮುಖ್ಯ ಕಾರಣ ಅದು ತನ್ನ ಅಭಿವೃದ್ಧಿಯ ನಿಮಿತ್ತ ಸಾಮ್ರಾಜ್ಯಶಾಹಿ ಧೋರಣೆಯನ್ನು ಅನುಸರಿಸುತ್ತಿರುವುದು.

ಇಂದಿನ ಅಭಿವೃದ್ಧಿಯು ಪ್ರಧಾನವಾಗಿ ಕೈಗಾರಿಕಾ ಕ್ರಾಂತಿಯನ್ನು ಅವಲಂಬಿಸಿದೆ. ಕೈಗಾರಿಕೆಗೂ, ಅಭಿವೃದ್ಧಿಗೂ ಅವಳಿ ಸಂಬಂಧವಿದೆ. ಕೈಗಾರಿಕಾ ಕ್ರಾಂತಿಗೆ ಮತ್ತು ಆಧುನಿಕ ಸಂಸ್ಕೃತಿಯ ಜೀವನಕ್ಕೆ ವಿದ್ಯುತ್‌ಶಕ್ತಿ ಪ್ರಧಾನವಾಗಿ ಬೇಕು. ಆದರೆ ವಿದ್ಯುತ್ ಶಕ್ತಿ ಯಾವ ಮೂಲದಿಂದ ಉತ್ಪಾದಿತವಾಗಬೇಕೆಂಬುದೇ ಇಂದಿನ ಜ್ವಲಂತ ಸಮಸ್ಯೆಯಾಗಿದೆ. ಇಂದಿನ ವಿದ್ಯುತ್‌ಕ್ಷೇತ್ರದಲ್ಲಿ ಎಲ್ಲ ತಂತ್ರಜ್ಞಾನಿಗಳ ಪ್ರಕಾರ ಅಣುಶಕ್ತಿಯ ಮೂಲಕ ತಯಾರಾಗುವ ವಿದ್ಯುತ್ ಶಕ್ತಿಯೇ ಹೆಚ್ಚು ಅಗ್ಗವೂ, ಹೆಚ್ಚು ಗುಣಾತ್ಮಕವೂ ಮತ್ತು ಹೆಚ್ಚು ಪರಿಸರ ಸ್ನೇಹಿಯೂ ಆಗಿದೆ ಎಂಬ ಅಭಿಪ್ರಾಯ ಮೂಡಿದೆ. ಈ ವಿಷಯದಲ್ಲೂ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಆದರೆ ಅಣು ವಿದ್ಯುತ್ ಉತ್ಪಾದನೆಯ ಇಡೀ ವಿಧಾನ ಬಹು ಕೇಂದ್ರಿತವಾಗಿದೆ. ಅಣು ವಿದ್ಯುತ್ ಉತ್ಪಾದನೆಗೆ ಬೇಕಾದ ಮೂಲ ಇಂಧನಕ್ಕಾಗಿ ನಲ್ವತ್ತೈದು ಹೊರದೇಶಗಳನ್ನು ಅವಲಂಬಿಸಬೇಕಾಗಿದೆ! ಅಮೇರಿಕಾದಂಥ ಬಲಾಢ್ಯ ರಾಷ್ಟ್ರದ ಕೈಗೊಂಬೆಯಾಗಬೇಕಾದ ಪರಿಸ್ಥಿತಿಯಿದೆ. ಅಭಿವೃದ್ಧಿಯಿಂದ ಸ್ವಾತಂತ್ರ ಪಡೆಯಬಹುದೆಂಬ ವಿಚಾರಕ್ಕೇ ಧಕ್ಕೆ ಒದಗುವ ಪರಿಸ್ಥಿತಿಯಿದೆ. ಅಲ್ಲದೆ ಈಗಾಗಲೆ ಎಲ್ಲರಿಗೂ ವಿದಿತವಾಗಿರುವಂತೆ ಅಣುಸ್ಥಾವರಗಳು ತುಂಬ ಅಪಾಯದ ತಾಣಗಳಾಗಿರುತ್ತವೆ. ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಆ ಅಣುಸ್ಥಾವರಗಳ ಕೆಲ ತ್ಯಾಜ್ಯಗಳಿಂದ ಅಣು ಅಸ್ತ್ರಗಳನ್ನು ತಯಾರಿಸಬಹುದಾಗಿದೆ. ಅಭಿವೃದ್ಧಿಯ ಪ್ರೇರಕವಾದ ವಿದ್ಯುತ್ ಶಕ್ತಿಯೇ ಮಾನವನ ಐಷಾರಾಮಿ ಜೀವನಕ್ಕೆ ಕಾರಣವಾಗಿ ಕಾಲಕ್ರಮೇಣ

ಅದು ಅಭಿವೃದ್ಧಿಯ ಚಕ್ರವನ್ನು ಹಿಂದಕ್ಕೆ ತಿರುಗಿಸಬಹುದು ಅಥವಾ ಅದನ್ನು ನಿಲುಗಡೆಗೆ ತರಬಹುದು ಈಗಿನ ವಿದ್ಯುತ್‌ಶಕ್ತಿಯ ಬಳಕೆಯಿಂದ ಸುಗಮ ಜೀವನ ನಿರ್ವಹಣೆಯಲ್ಲಿ ಏನೆಲ್ಲ ತೊಂದರೆಗಳಾಗುತ್ತಿವೆ ಎಂಬುದು ಅನುಭವ ಸಿದ್ಧವಾಗಿದೆ. ಆದ್ದರಿಂದ ವಿದ್ಯುತ್ ಶಕ್ತಿಯ ಉಪಯೋಗ ಯಾವ ಪ್ರಮಾಣದವರೆಗೆ ಎಂಬುದನ್ನು ತೀರ್ಮಾನಿಸುವ ಪರಿಸ್ಥಿತಿಯೂ ಉಂಟಾಗಲಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೇನೆಂದರೆ ವಿದ್ಯುತ್‌ಚ್ಛಕ್ತಿಯ ಉಪಯೋಗ ಕೈಗಾರಿಕೆಗಳಲ್ಲಿ ಹೆಚ್ಚಾಗಿ ಆಗುತ್ತ ಹೋದಂತೆ ಸಮಾಜದ ಇಡೀ ಆರ್ಥಿಕ ವ್ಯವಸ್ಥೆಯೇ ಕೇಂದ್ರಿಕೃತವಾಗುತ್ತದೆ. ಕೇಂದ್ರೀಕೃತ ವ್ಯವಸ್ಥೆಯೆಂದರೆ ಶೋಷಣೆ, ಅಧಿಕಾರದ ಕೇಂದ್ರೀಕರಣ ನಿಜವಾದ ಅಭಿವೃದ್ಧಿಯ ನಿರಾಕರಣೆ. ಅಭಿವೃದ್ಧಿಗಾಗಿ ಉಪಯೋಗಿಸಲಾಗುತ್ತಿರುವ ಎಲ್ಲ ಪ್ರಕಾರದ ಯಂತ್ರಗಳು ಉದ್ಯೋಗ ಕ್ಷೇತ್ರದ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರುತ್ತಿವೆ. ಈಗ ಜಾರಿಯಲ್ಲಿರುವ ಪ್ರಧಾನ ಮಂತ್ರಿ ಉದ್ಯೋಗ ಖಾತ್ರಿ ಯೋಜನೆಯನ್ನು ಗಮನಿಸಿದರೆ ಗೊತ್ತಾಗುತ್ತದೆ. ನಿರ್ಮಾಣ ಕಾರ್ಯದಲ್ಲಿ ಆಧುನಿಕವಾದ ಸಂಕೀರ್ಣ ಯಂತ್ರಗಳನ್ನು ಗುತ್ತಿಗೆದಾರರು ಉಪಯೋಗಿಸುತ್ತಿರುವುದರಿಂದ ಕೆಲಸ ಮಾಡಲು ಅರ್ಹರಾಗಿರುವ ಕೈಗಳಿಗೆ ಕೆಲಸ ದಕ್ಕದೇ ಹೋಗುತ್ತಿದೆ. ಆಗ ಅವರಿಗೆ ದೊರೆಯ ಬೇಕಾದ ಕೂಲಿಯೂ ಸಿಗದೆ ನಿರುದ್ಯೋಗ ಮತ್ತು ಆರ್ಥಿಕ ಮುಗ್ಗಟ್ಟಿನ ಸ್ಥಿತಿ ಹಾಗೆಯೇ ಮುಂದುವರಿಯುತ್ತದೆ. ಅನೇಕ ಸಮೀಕ್ಷೆಗಳಿಂದ ಈ ವಿಷಯ ಸ್ಪಷ್ಟವಾಗಿದೆ. ಉದ್ಯೋಗ ಭರವಸೆ ಯೋಜನೆಗೂ, ಭೌತಿಕ ಅಭಿವೃದ್ಧಿಗೂ ಸಂಬಂಧವಿದೆ. ಸೇತುವೆಗಳ ನಿರ್ಮಾಣ, ಮೇಲ್ಸಾರಿಗಳ ನಿರ್ಮಾಣ, ರಸ್ತೆಗಳ ರಚನೆ, ಕೆರೆಗಳ ದುರಸ್ತಿ, ಶಾಲಾ ಕಟ್ಟಡಗಳ ನಿರ್ಮಾಣ ಇತ್ಯಾದಿ ಸಾರ್ವಜನಿಕ ಉಪಯೋಗಿ ಮೂಲ ಸೌಕರ್ಯಗಳ ನಿರ್ಮಾಣ ಉದ್ಯೋಗ ಭರವಸೆ ಯೋಜನೆಯಲ್ಲಿ ಸೇರಿವೆ. ಮೇಲ್ನೋಟಕ್ಕೆ ಇವು ಸಮಂಜಸವಾಗಿ ಕಂಡರೂ ಇವುಗಳ ನಿರ್ಮಾಣದ ಪ್ರಕ್ರಿಯೆಯಲ್ಲಿ ಬಹಳಷ್ಟು ಪರಿಸರ ನಾಶವಾಗುತ್ತಿದೆ. ಉದ್ಯೋಗ ಭರವಸೆಯ ಭರಾಟೆಯಲ್ಲಿ ಆಗುತ್ತಿರುವ ಪರಿಸರನಾಶದ ಲೆಕ್ಕವನ್ನು ಯಾರೂ ಹಾಕುತ್ತಿಲ್ಲ, ಹಾಕುವುದು ಸಾಧ್ಯವೂ ಇಲ್ಲ. ಸರ್ಕಾರಕ್ಕೂ, ಸಮಾಜಕ್ಕೂ ಈ ಬಗ್ಗೆ ಕಾಳಜಿಯಿಲ್ಲ. ಅಭಿವೃದ್ಧಿ ನೀತಿಯ ಕಾರಣದಿಂದಾಗಿ ಶಿಲಾಬೆಟ್ಟಗಳು ಕರಗುತ್ತಿವೆ, ಕಾಡುಗಳು ಕೃಶವಾಗುತ್ತಿವೆ, ಅಂತರಜಲ ಬತ್ತಿ ಹೋಗುತ್ತಿದೆ, ಹವಾಮಾನ ಪ್ರದೂಷಿತಗೊಳ್ಳುತ್ತಿದೆ. ಇಂಥ ಪರಿಸರ ನಾಶಗಳು ಒಂದೇ, ಎರಡೇ ಸಹಸ್ರಾರು. ಭೌತಿಕ ಅಭಿವೃದ್ಧಿಗೆ ಕೊನೆಯಿಲ್ಲ, ಮೊದಲಿಲ್ಲ.

ವಿಜ್ಞಾನದಲ್ಲಿ ಆಗಿರುವ ಶೋಧನೆಗಳಿಂದಾಗಿ ಇಂದು ಜಗತ್ತು ಚಪ್ಪಟೆಯಾಗಿದೆ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ಈಗ್ಗೆ ಸುಮಾರು ೫೦೦ ವರ್ಷಗಳ ಹಿಂದೆ ಕ್ರಿಸ್ಟೋಫರ್ ಕೊಲಂಬಸ್ ಕ್ರಿಶ್ಚಿಯನ್ ಧರ್ಮದ ಪ್ರಚಾರಕ್ಕಾಗಿ ಮತ್ತು ಐಶ್ವರ್ಯದ ಶೋಧನೆಗಾಗಿ ಅಂದಿನ ರಾಜರ ಇಚ್ಛೆಯ ಮೇರೆಗೆ ಸಮುದ್ರ ಮಾರ್ಗದ ಹೊಸ ಶೋಧನೆಗೆ ಹೊರಟು ಮರಳಿ ತನ್ನ ದೇಶಕ್ಕೆ ಹಿದಿರುಗಿದ ಮೇಲೆ ಅವನು ಫರ್ಡಿನಾಂಡ್ ರಾಜನಿಗೂ, ಇಸಾಬೆಲ್ಲಾ ರಾಣಿಗೂ ಭೂಮಿ ದುಂಡಗಿದೆಯೆಂದು ಹೇಳಿದ. ಈಗ ಮಾನವನ ಕೈಗೆ ಸಿಕ್ಕಿರುವ ಕಂಪ್ಯೂಟರ್‌ಗಳಿಂದಾಗಿ ಉಂಟಾಗಿರುವ ಅಭೂತಪೂರ್ವ

ಸಂಪರ್ಕ ವ್ಯವಸ್ಥೆ, ದಿನನಿತ್ಯ ಅನಾವರಣ ಗೊಳ್ಳುತ್ತಿರುವ ವೈಜ್ಞಾನಿಕ ಸಾಧನೆಗಳು ಭೂಮಿಯನ್ನು ಚಪ್ಪಟೆಗೊಳಿಸಿವೆ, ಕ್ರಿಕೆಟ್ ಅಥವಾ ಫುಟಬಾಲ್ ಕ್ರೀಡೆಗಳ ಮೈದಾನದಂತೆ. ಈ ಮೈದಾನದಲ್ಲಿ ಎಲ್ಲ ದೇಶಗಳಿಗೆ ಅಭಿವೃದ್ಧಿ ಇನ್ನು ಮರೀಚಿಕೆಯಲ್ಲ ನೈಜ ಸಂಗತಿ, ಪ್ರತ್ಯಕ್ಷವಾಗಿ ಅನುಭವಿಸ ಬಹುದಾದ ವಿಷಯ. ಆದರೂ ಕೂಡ ಈ ತಂತ್ರಾಂಶದ ತಂತ್ರಜ್ಞಾನ ಸಾಮಾಜಘಾತಕ ಶಕ್ತಿಗಳ ಕೈಸೇರಿದರೆ ವಿಶ್ವವಾಣಿಜ್ಯ ಸಂಸ್ಥೆಗೆ ಆದ ಹಣೆಬರಹ ಇನ್ನೂ ಅನೇಕ ಸ್ಥಾವರಗಳಿಗೂ ಆಗುವ ಸಾಧ್ಯತೆ ಇದೆ. ಇಷ್ಟೇ ಅಲ್ಲ ಎಲ್ಲ ಜನನಿಬಿಡ ಪ್ರದೇಶಗಳಲ್ಲಿ ದೊಡ್ಡ ನಗರಗಳಲ್ಲಿ ಬಾಂಬ್ ಸ್ಫೋಟಿಸುವಂಥದು, ಮಾನವಬಾಂಬುಗಳ ದಾಳಿ ಇತ್ಯಾದಿಗಳು ಸರ್ವೇ ಸಾಮಾನ್ಯವಾಗಿ ಜನರ ಬದುಕು ಆತಂಕದ ಸುಳಿಯಲ್ಲಿ ಸಿಕ್ಕಿ ಹಾಕಿಕೊಳ್ಳುವುದು. ಜಗತ್ತು ಚಪ್ಪಟೆಯಾಗಿದೆ ಎಂಬುದರಲ್ಲಿ ಹಲವು ಪ್ರಯೋಜನಗಳಿದ್ದರೂ, ಅನೇಕ ಭಯಾನಕ ಅಂಶಗಳೂ ಅಡಗಿವೆ. ತಂತ್ರಾಂಶ ಜ್ಞಾನದ ವ್ಯಾಪಕತೆಯೇ ಅನಿಯಂತ್ರಿತ ಮಾರಕ ಬೆಳವಣಿಗೆಗಳಿಗೆ ಕಾರಣವಾಗುವ ಎಲ್ಲ ಸಾಧ್ಯತೆಯೂ ಇದೆ. ಭೂಮಿ ದುಂಡಗಿದೆ ಎಂಬ ವಾಸ್ತವದಲ್ಲಿಯೂ, ಈಗ ವೈಜ್ಞಾನಿಕವಾಗಿ ಮಾತ್ರ ಭೂಮಿ ಚಪ್ಪಟೆಯಾಗಿದೆಯೆಂಬ ವಾಸ್ತವದಲ್ಲಿಯೂ ಮಾನವನ ದುರಂತಕ್ಕೆ ಯಾವ ಪರಿಹಾರವೂ ಇಲ್ಲ. ಈ ಎರಡು ವಾಸ್ತವಗಳನ್ನು ಮೀರಿ ಇನ್ನೊಂದು ವಾಸ್ತವ, ಜಗತ್ತು ಈಗ ಒಂದು ಗ್ರಾಮ ಎಂಬುದು. ಈ ಮೂರನೆಯ ವಾಸ್ತವದಲ್ಲಿಯೇ ಮಾನವ ಕುಲದ ಏಳಿಗೆ ಇದೆ.

ಇಂದಿನ ಅಭಿವೃದ್ಧಿ ನೀತಿಗಳು ಪರಸ್ಪರ ವಿರೋಧಾತ್ಮಕವಾಗಿವೆಯಷ್ಟೇ ಅಲ್ಲ ಅನೇಕ ಬಗೆಯ ಸಾಮಾಜಿಕ-ಆರ್ಥಿಕ-ರಾಜಕೀಯ ಸಮಸ್ಯೆಗಳಿಗೆ ಕಾರಣವಾಗುತ್ತಿವೆ. ಹಿಂದುಳಿದ ವರ್ಗಗಳನ್ನು ಅಭಿವೃದ್ಧಿಯ ದಾರಿಯಲ್ಲಿ ತೆಗೆದುಕೊಂಡು ಹೋಗಬೇಕೆಂಬ ದೃಷ್ಟಿಯಿಂದ ಜಾರಿಗೆ ಬಂದಿರುವ ಮೀಸಲಾತಿ ನೀತಿ ಸಮಾಜದಲ್ಲಿ ವರ್ಗ ವರ್ಗಗಳ ಮಧ್ಯೆ, ಜನಾಂಗ-ಜನಾಂಗಗಳ ಮಧ್ಯೆ, ಧರ್ಮ-ಧರ್ಮಗಳ ಮಧ್ಯೆ ಸಾಮಾಜಿಕ ಸಾಮರಸ್ಯವನ್ನು ಉಂಟುಮಾಡುವುದರ ಬದಲು ವಿರಸವನ್ನುಂಟುಮಾಡುತ್ತಿದೆ. ಈ ಮೀಸಲಾತಿ ಭಾವನೆ "ಹಿಂದೂ ನೀರು, ಮುಸ್ಲಿಮ್ ನೀರು" ಎಂಬಷ್ಟಕ್ಕೆ ನಿಲ್ಲದೆ ಇಸ್ಲಾಂ ಬಾಂಬ್, ಹಿಂದೂ ಬಾಂಬ್ ಎನ್ನುವಷ್ಟರ ಮಟ್ಟಿಗೆ ಹೋಗಿದೆ.

ಅಭಿವೃದ್ಧಿಯ ವಿಚಾರವು ವಿಜ್ಞಾನಕ್ಕೆ ತಳಕು ಹಾಕಿಕೊಂಡಿರುವಂತೆ ರಾಜಕೀಯದ ಜೊತೆಗೂ ತಳಕು ಹಾಕಿಕೊಂಡಿದೆ. ಹೆಚ್ಚು-ಹೆಚ್ಚು ಮತ ಪಡೆಯಲು ಆಯಾ ಧರ್ಮ, ಅಥವಾ ಜಾತಿಯ ಜನರಿಗೆ ಅಭಿವೃದ್ಧಿಯ ಆಸೆಯನ್ನು ತೋರಿಸಿ ಮತದಾರರನ್ನ ಓಲೈಸಿಕೊಳ್ಳುವ ಹೀನ ರಾಜಕೀಯ ಪ್ರವೃತ್ತಿ ಬೆಳೆದಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಕರಾಳ ಛಾಯೆ ಚಲ್ಲಿದೆ. ಆದ್ದರಿಂದ ಜಗತ್ತಿನ ಬಹುಸಂಖ್ಯಾತ ದೇಶಗಳಲ್ಲಿ ಅಭಿವೃದ್ಧಿ ಪ್ರಗತಿಗೆ ಸಾಧನವಾಗಿರದೆ, ಆಯಾ ದೇಶದ ವಿಗತಿಗೆ ಕಾರಣವಾಗುತ್ತಿದೆ.

ಈ ಸಂದರ್ಭದಲ್ಲಿಯೇ ಅಭಿವೃದ್ಧಿಯ ನೀತಿಯಾಗಿ ಸರ್ವೋದಯ ಸಿದ್ಧಾಂತ ಅಗತ್ಯವೆನಿಸುತ್ತದೆ.

ಅಭಿವೃದ್ಧಿಯ ನೀತಿಯನ್ನಾಗಿ ಸರ್ವೋದಯ ಸಿದ್ಧಾಂತವನ್ನು ಅನುಸರಿಸುವಲ್ಲಿ

ಈ ಕೆಳಗಿನ ಅಂಶಗಳು ಸಮಾಜದ ಒಳಿತಿಗಾಗಿ ಸಹಾಯಕ್ಕೆ ಬರುತ್ತವೆ.

೧. ಆಧುನಿಕ ಪ್ರಕಾರದ ಅಭಿವೃದ್ಧಿಯ ನೀತಿಗೆ ಇರುವಂಥ ಯಾವುದೇ ಸಂಕುಚಿತ ದೃಷ್ಟಿ ಸರ್ವೋದಯ ದೃಷ್ಟಿಕೋನದ ಅಭಿವೃದ್ಧಿಗೆ ಇಲ್ಲ. ಅದು ಎಲ್ಲಾ ವರ್ಗದ ಸಮಾಜದ ಒಟ್ಟು ಅಭಿವೃದ್ಧಿಯನ್ನು ಏಕಕಾಲಕ್ಕೆ ಪ್ರಚಲಿತವಾಗುವಂತೆ ಹೊಂದಿರುತ್ತದೆ.

೨. ಆಧುನಿಕ ಅಭಿವೃದ್ಧಿ ನೀತಿಗೆ ಸಾಧ್ಯವೂ ಹಣವೇ, ಸಾಧನವೂ ಹಣವೇ. ಉದ್ದೇಶ ಕೆಲವರ ಶ್ರೀಮಂತಿಕೆಯನ್ನು ಹೆಚ್ಚಿಸುವುದಾಗಿದೆ. ಆದರೆ ಸರ್ವೋದಯ ಸಿದ್ಧಾಂತದ ಅಭಿವೃದ್ಧಿ ನೀತಿಯಲ್ಲಿ ಹಾಗೂ ಪ್ರಕ್ರಿಯೆಯಲ್ಲಿ ಸಾಧ್ಯವೂ ಜನತೆಯೇ, ಸಾಧನವೂ ಜನತೆಯೇ. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಜನತೆ ದಂಡೆಯ ಮೇಲೆ ನಿಂತು ನೋಡುವ ಪ್ರೇಕ್ಷಕರಾಗಿರದೆ ಅಭಿವೃದ್ಧಿಯ ಮುಖ್ಯ ವಾಹಿನಿಯಲ್ಲಿ ಸೇರಿಕೊಂಡವರಾಗಿರುತ್ತಾರೆ. ಶ್ರೀಮಂತಿಕೆ ಸಮಾಜದ ಎಲ್ಲಾ ವರ್ಗಗಳಲ್ಲಿ ಸಮಾನವಾಗಿ ಹಂಚಿಹೋಗುವ ವ್ಯವಸ್ಥೆ ಇರುತ್ತದೆ.

೩. ಈಗಿನ ಅಭಿವೃದ್ಧಿ ನೀತಿಯಲ್ಲಿ ಸಣ್ಣ ಮೀನನ್ನು ದೊಡ್ಡ ಮೀನು ತಿನ್ನುವುದಕ್ಕೆ ಪ್ರೋತ್ಸಾಹವಿದ್ದರೆ, ಸರ್ವೋದಯ ಸಿದ್ಧಾಂತದ ಅಭಿವೃದ್ಧಿ ನೀತಿಯಲ್ಲಿ ದುರ್ಬಲರಿಗೆ ರಕ್ಷಣೆಯ ಭರವಸೆಯೊಂದಿಗೆ ಅವರ ವ್ಯಕ್ತಿತ್ವದ ಸಮಗ್ರ ಅಭಿವೃದ್ಧಿಗೆ ಅವಕಾಶವಿದೆ. ಅಲ್ಲಿ ಪರಸ್ಪರ ಸ್ವಾರ್ಥಗಳ ತಾಕಲಾಟವಿಲ್ಲ; ಬದಲಿಗೆ ಸಮರಸತೆ ಇದೆ.

೪. ಈಗಿನ ಅಭಿವೃದ್ಧಿಯ ಆರ್ಥಿಕ ಪರಿಣಾಮದಿಂದ ಶ್ರೀಮಂತರು ಇನ್ನೂ ಹೆಚ್ಚು ಶ್ರೀಮಂತರು, ಬಡವರು ಇನ್ನೂ ಹೆಚ್ಚು ಬಡವರಾಗುತ್ತಾರೆ. ಆದರೆ ಸರ್ವೋದಯ ಅಭಿವೃದ್ಧಿ ಸಿದ್ಧಾಂತವು ಬಡವರ ಏಳಿಗೆಗೇ ಪ್ರಾಧಾನ್ಯತೆ ಕೊಡುತ್ತದೆ.

೫. ಸದ್ಯದ ಅಭಿವೃದ್ಧಿ ನೀತಿಯು ನಗರಗಳ ನಿರ್ಮಾಣದತ್ತ, ಅವುಗಳ ಬೆಳವಣಿಗೆಯತ್ತ ಹೆಚ್ಚು ಪ್ರಾಮುಖ್ಯತೆ ಕೊಟ್ಟರೆ, ಸರ್ವೋದಯ ಸಿದ್ಧಾಂತವು ಗ್ರಾಮಗಳ ಉಳಿಯುವಿಕೆಯತ್ತ, ಸಣ್ಣ-ಸಣ್ಣ ಸಮುದಾಯಗಳ ಸ್ಥಾಪನೆಯತ್ತ ಪ್ರಾಮುಖ್ಯತೆ ಕೊಡುತ್ತದೆ.

೬. ಇವತ್ತಿನ ಅಭಿವೃದ್ಧಿ ನೀತಿ ಕೈಗಾರಿಕೆಯನ್ನು ಕೇಂದ್ರೀಕೃತಗೊಳಿಸಿದರೆ ಸರ್ವೋದಯ ಸಿದ್ಧಾಂತದಲ್ಲಿ ಕೈಗಾರಿಕಾ ನೀತಿ ವಿಕೇಂದ್ರಿತಗೊಂಡು ಗ್ರಾಮ-ಗ್ರಾಮಗಳಲ್ಲಿ, ಮನೆ-ಮನೆಗಳಲ್ಲಿ ವ್ಯಕ್ತಿ ಆಧಾರಿತವಾಗಿ ನಡೆದು ನಿಜಾರ್ಥದಲ್ಲಿ ದೇಶ ಕೈಗಾರಿಕಾಕರಣಗೊಳ್ಳುತ್ತದೆ.

೭. ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿ ಕೃಷಿಯನ್ನು ಹಾಳುಗೆಡವಿದರೆ, ಸರ್ವೋದಯ ಮಾದರಿಯ ಅಭಿವೃದ್ಧಿ ಇಡೀ ಸಮುದಾಯದ ಜೀವನವೇ ಕೃಷಿ ಕೇಂದ್ರಿತ, ಕೃಷಿ ಆಧಾರಿತವಾಗಿರುವಂತೆ ನೋಡಿಕೊಳ್ಳುತ್ತದೆ, ಕೈಗಾರಿಕೆ ಕೃಷಿಗೆ ಪೋಷಕವಾಗಿರುತ್ತದೆ.

೮. ಸರ್ವೋದಯ ಸಿದ್ಧಾಂತ ಈಗ ಎಲ್ಲೆಲ್ಲೂ ತಲೆಯೆತ್ತುತ್ತಿರುವ ವಿಶೇಷ ಆರ್ಥಿಕ ವಲಯಗಳ ಬದಲಾಗಿ ಕೆಲವು ಗ್ರಾಮಗಳ ಸಮೂಹವೇ ಆರ್ಥಿಕ ವಲಯಗಳಾಗುವಂತೆ ನೋಡಿಕೊಳ್ಳುವುದು, ಏಕೆಂದರೆ ಇಂದಿನ Special Economic Zoneಗಳು Special Exploitation Zoneಗಳಾಗಿ ಮಾರ್ಪಾಡುಗೊಂಡಿದೆ,

ಈ ಯೊಜನೆಗಳನ್ನು ಸರ್ವೋದಯ ಸಿದ್ಧಾಂತ ಬಲವಾಗಿ ವಿರೋಧಿಸುತ್ತದೆ.

೯. ಅಮೇರಿಕಾ ಮಾದರಿಯ ಅಭಿವೃದ್ಧಿ ದೇಶೀಯ ಸಂಸ್ಕೃತಿ, ದೇಸೀಯ ಭಾಷೆಗಳನ್ನು ನಷ್ಟಮಾಡಿ ಏಕಪ್ರಕಾರದ ಸಂಸ್ಕೃತಿ, ಏಕ ಭಾಷೆಯ ಪರವಾಗಿದ್ದರೆ ಸರ್ವೋದಯ ಸಿದ್ಧಾಂತದ ಅಭಿವೃದ್ಧಿ ಎಲ್ಲ ದೇಶೀಯ ಸಂಸ್ಕೃತಿಗಳ, ಎಲ್ಲ ದೇಶೀಯ ಭಾಷೆಗಳ ಅಭಿವೃದ್ಧಿಗೆ ಮಹತ್ವಕೊಡುತ್ತದೆ. ಅಲ್ಲದೆ ವಿವಿಧತೆಯಲ್ಲಿ ಏಕತೆ, ಮತ್ತು ಐಕ್ಯತೆಗೆ ವಿಶೇಷ ಮಹತ್ವಕೊಡುತ್ತದೆ.

೧೦. ಇಂದಿನ ಪ್ರತಿಯೊಂದು ದೇಶದ ಪ್ರತಿಯೊಂದು ಅಭಿವೃದ್ಧಿ ನೀತಿಯು ರಾಜಕಾರಣದ ದಿಕ್ಕನ್ನು ತಪ್ಪಿಸಿದೆ. ರಾಜಕಾರಣವನ್ನು ತತ್ವ ರಹಿತವನ್ನಾಗಿ ಮಾಡಿದೆ. ರಾಜಕಾರಣವು ಪ್ರಜೆಗಳದಾಗಿರದೆ, ಕೈಗಾರಿಕೋದ್ಯಮಿಗಳ ಹಣದ ಚೀಲದ್ದಾಗಿದೆ. ಅಭಿವೃದ್ಧಿಯ ಹುಚ್ಚು ಹೊಳೆ ಪ್ರಜಾಪ್ರಭುತ್ವವನ್ನು ಹಾರಿಸಿಕೊಂಡು ಹೋಗಿದೆ.

೧೧. ಆದರೆ ಸರ್ವೋದಯ ಸಿದ್ಧಾಂತವು ರಾಜ್ಯ ವ್ಯವಸ್ಥೆಯನ್ನು ಪಿರಮಿಡ್ ಮಾದರಿಯಲ್ಲಿ ನಿರ್ಮಿಸುತ್ತಾ ಭೂಮಿಯ ಒಡೆತನ ಗ್ರಾಮ ಸಮುದಾಯದ್ದಾಗಿರುವಂತೆ ನೋಡಿಕೊಳ್ಳುತ್ತಾ ಜನರಿಂದ ಜನರ ಹಿತಕ್ಕಾಗಿ ನಡೆಯುವ ಸ್ವರಾಜ್ಯವನ್ನು ಸ್ಥಾಪಿಸುವುದು.

೧೨. ಅಭಿನವ ಅಭಿವೃದ್ಧಿ ನೀತಿ ಪ್ರಗತಿಯನ್ನು G.D.P ಮತ್ತು ತಲಾ ಆದಾಯದ ಆಧಾರದ ಮೇಲೆ ಅಳೆದರೆ ಪ್ರಾಚೀನತೆಯೊಂದಿಗೆ ನಿತ್ಯ ನವೀನತೆಯನ್ನೂ ಹೊಂದಿರುವ ಸರ್ವೋದಯ ಸಿದ್ಧಾಂತ Gross National Happiness ಮತ್ತು Per Human Happiness ಮೇಲೆ ಅಳೆಯುತ್ತದೆ.

೧೩. ಪಾಶ್ಚಿಮಾತ್ಯ ಅಭಿವೃದ್ಧಿ ನೀತಿ ಮಹಿಳೆಯರನ್ನು ಮಾರಾಟದ-ಭೋಗದ ವಸ್ತುವನ್ನಾಗಿ ಮಾಡಿದ್ದರೆ ಸರ್ವೋದಯ ಸಿದ್ಧಾಂತದ ಅಭಿವೃದ್ಧಿ ನೀತಿ ಮಹಿಳೆಯರ ಗೌರವವನ್ನು ಹೆಚ್ಚಿಸುವುದರ ಜೊತೆಗೆ ಅವರಿಗೆ ಸ್ವಾಭಿಮಾನವನ್ನು ತಂದುಕೊಡುತ್ತದೆ.

೧೪. ವರ್ತಮಾನದ ಅಭಿವೃದ್ಧಿ ನೀತಿ ಯುದ್ಧಮಯ, ಹಿಂಸಾಮಯ, ಜನಾಂಗೀಯ ಸಂಘರ್ಷಮಯ ಜಗತ್ತನ್ನು ನಿರ್ಮಿಸಿದ್ದರೆ ಸರ್ವೋದಯ ಸಿದ್ಧಾಂತದ ಅಭಿವೃದ್ಧಿ ನೀತಿ, ಯುದ್ಧರಹಿತ, ಅಹಿಂಸಾ ಪ್ರಧಾನ, ಜನಾಂಗೀಯ ಸೌಹಾರ್ದತೆಯ ಜಗತ್ತನ್ನು ನಿರ್ಮಿಸುತ್ತದೆ.

೧೫. ಸಧ್ಯದ ಅಭಿವೃದ್ಧಿಯ ರೀತಿ ಭೋಗ ಜೀವನಕ್ಕೆ ಪ್ರೋತ್ಸಾಹ ಕೊಡುವುದರ ಮೂಲಕ, ಪರಿಸರ ನಾಶ, ಹವಾಮಾನದ ಏರುಪೇರು ಮುಂತಾದವುಗಳಿಗೆ ಕಾರಣವಾದರೆ ಸರ್ವೋದಯ ಸಿದ್ಧಾಂತಾಧಾರಿತ ಅಭಿವೃದ್ಧಿ ನೀತಿ ಸರಳ ಜೀವನ-ಉನ್ನತ ವಿಚಾರಕ್ಕೆ ಪ್ರೋತ್ಸಾಹ ಕೊಡುವುದರ ಮೂಲಕ ಅಂತ್ಯೋದಯಾಧಾರಿತ ಸರ್ವೋದಯ ಸಮಾಜವನ್ನು ನಿರ್ಮಿಸುವುದು.

ಇದುವರೆಗೆ ಚರ್ಚಿಸಲಾದ ಅಭಿವೃದ್ಧಿಯ ವಿಷಯ ಇನ್ನೂ ಹೆಚ್ಚು ಖಂಡನೆಗೆ ಒಳಗಾಗುವ ಬಹಳಷ್ಟು ಪೂರಕ ಸಂಗತಿಗಳಿವೆ. ಈಗ್ಗೆ ನೂರು ವರ್ಷಗಳ ಹಿಂದೆ ಮಹಾತ್ಮಾ ಗಾಂಧೀಜಿ ಬರೆದಿದ್ದ ಹಿಂದ್ ಸ್ವರಾಜ್ಯ ಪುಸ್ತಕದಲ್ಲಿಯ ಮಾತುಗಳ-ವಿಚಾರಗಳ ಒರೆಗಲ್ಲಿಗೆ ಈ ೨೧ನೇ ಶತಮಾನದ ಎಲ್ಲ ಕ್ಷೇತ್ರಗಳಲ್ಲಿಯ ಅಭಿವೃದ್ಧಿಯನ್ನು ಉಜ್ಜಿ

ನೋಡಿದರೆ ಎಲ್ಲ ಪೊಳ್ಳು ಸುಳ್ಳು ಎಂದು ಸಿದ್ಧವಾಗಿ ಆಘಾತವಾಗದೇ ಇರದು.

೧೬. ಅಭಿವೃದ್ಧಿಯನ್ನು ಇಡೀ ಪ್ರಪಂಚ ಕುರುಡು ಕುರುಡಾಗಿ ಹಿಂಬಾಲಿಸುತ್ತಿದೆ. ಆಧುನಿಕ ಅಭಿವೃದ್ಧಿಯ ಸಿದ್ಧಾಂತಗಳನ್ನು ಯಾರೂ ಪ್ರಶ್ನಿಸುವ ಸಾಹಸಮಾಡುತ್ತಿಲ್ಲ. ಏಕೆಂದರೆ ತೋರಿಕೆಯ ಈ ಅಭಿವೃದ್ಧಿಯ ಕಾರ್ಯಕಲಾಪಗಳಲ್ಲಿಯೇ ಎಲ್ಲರ ಸ್ವಾರ್ಥ ಸುಭದ್ರವಾಗಿದೆ! ಆದ್ದರಿಂದ ಯಾರು ಯಾರನ್ನೂ ಪ್ರಶ್ನಿಸುವುದಿಲ್ಲ. ವಿಮರ್ಶಕ ಜಾರ್ಜ್ ಸ್ಟೈನರ್ ಈ ಕುರಿತು ಹೇಳಿರುವ ಮಾತು ಮನನೀಯವಾಗಿದೆ :– To ask longer questions is to risk getting things wrong. Not to ask them at all is to constrain the life-of understanding. ಆದ್ದರಿಂದ ಇಪ್ಪತ್ತೊಂದನೇ ಶತಮಾನದ ಅಭಿವೃದ್ಧಿಯ ಪರಿಯನ್ನು ಜನತೆ ಪ್ರಶ್ನಿಸುವ ಕಾಲ ಈಗ ಸನ್ನಿಹಿತವಾಗಿದೆ. ಈಗ ತುರ್ತಾಗಿ ಪ್ರಶ್ನಿಸಬೇಕಾದ ಕೆಲ ಪ್ರಶ್ನೆಗಳು ಇಂತಿವೆ :–

೧. ಭಾರತ ಮತ್ತು ಇತರ ದೇಶಗಳು ಕೈಗೊಂಡಿರುವ ಚಂದ್ರಯಾನದಂತಹ ಯೋಜನೆಗಳು ಅಗತ್ಯವೇ?

೨. ದೇಶದ ಎಲ್ಲ ಜಿಲ್ಲೆಗಳಿಗೆ ಪರಸ್ಪರ ವಿಮಾನ ಸಂಪರ್ಕ ಅಗತ್ಯವೇ?

೩. ಜನತಾ ಶಕ್ತಿಯನ್ನು ಕಡೆಗಣಿಸಿ ಧನಶಕ್ತಿಯನ್ನೇ ನಂಬಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿರುವವುದು ಸರಿಯೇ?

೪. ಗ್ರಾಮಗಳನ್ನು ಉಪೇಕ್ಷಿಸಿ ನಗರಗಳ ನಿರ್ಮಾಣ ಸರಿಯೇ?

೫. ಜಾಗತೀಕರಣದ ಹೆಸರಿನಲ್ಲಿ ಅಮೇರಿಕೀಕರಣಗೊಳಿಸುತ್ತಿರುವುದು ಸರಿಯೇ?

ಇಂದಿನ ಅಭಿವೃದ್ಧಿ ಕುರಿತು ಇಂಥ ಸಾವಿರಾರು ಪ್ರಶ್ನೆಗಳು ಪ್ರಪಂಚದಾದ್ಯಂತ ಇರುವ ಸಾವಿರಾರು ಚಿಂತಕರ ಮನಸ್ಸನ್ನು ಕಾಡುತ್ತಿವೆ. ಡಿ.ವಿ.ಜಿ. ಹೇಳುವಂತೆ "ಬದುಕು ನಮ್ಮ ಪಾಲಿಗೆ ಹಳಸಿದೆ." ಆದ್ದರಿಂದ ಸಾಮಾಜಿಕ, ಆರ್ಥಿಕ, ರಾಜಕೀಯ ವೈರುಧ್ಯಗಳನ್ನು, ಅಸಮತೋಲನವನ್ನು, ಅಶಾಂತಿ, ಹಿಂಸೆಯನ್ನು ಸೃಷ್ಟಿಸುವ ಇಂದಿನ ಆಧುನಿಕ ಮಾನವೀಯತೆ ವಿಹೀನ ಪಥವನ್ನು ಬಿಟ್ಟು ಇಡೀ ಭೂಲೋಕದ ಸರ್ವಾಂಗೀಣ ಹಿತಚಿಂತನೆ ಮಾಡುವ ಸರ್ವೋದಯ ವಿಚಾರಾಧಾರಿತ ಅಭಿವೃದ್ಧಿಯ ಪಥವನ್ನು ಅನುಸರಿಸ ಬೇಕು, ಏಕೆಂದರೆ ಇಂದಿನ ಅಭಿವೃದ್ಧಿಯಲ್ಲಿ ಶ್ರೀ ರಾಮಚಂದ್ರನ ಗುಣಗಳೂ ಇಲ್ಲ, ಏಸುವಿನ ಕರುಣೆಯೂ ಇಲ್ಲ, ಪೈಗಂಬರನ ಶಾಂತಿಯೂ ಇಲ್ಲ, ಮಹಾವೀರನ ಅಹಿಂಸೆಯೂ ಇಲ್ಲ, ಬುದ್ಧನ ಕರುಣೆಯೂ ಇಲ್ಲ.

೧೭. ಬಂಡವಾಳಶಾಹಿ ಸೋತಿದೆ, ಸಾಮ್ಯವಾದ ಸೋತಿದೆ, ಸಮಾಜವಾದ ಸೋತಿದೆ. ಇನ್ನು ಇರುವುದು ಸರ್ವೋದಯ ಕಾಲ. ಸರ್ವೋದಯ ಸಮಾಜ ಸ್ಥಾಪನೆಗಾಗಿ ವಿನೋಬಾ ಕೊಟ್ಟಿರುವ ಈ ಮಂತ್ರ ನಮಗೆ ದಾರಿದೀಪವಾಗಲಿ :–

ಬ್ರಹ್ಮಸತ್ಯಂ ಜಗತ್ ಸ್ಫೂರ್ತಿಃ
ಜೀವನಂ ಸತ್ಯಶೋಧನಂ.

* * *

ಸಂಗೀತ ಕಲಾವಿದರು – ೧೫

ಗಾಯಕ ಮದನ್‌ಲಾಲ್ ಮೋಹನ್ ಮಿಶ್ರಾ

ಮೋಹನ್ ಲಾಲ್ ಮಿಶ್ರಾರವರು ಬನಾರಸ ಪದ್ಧತಿಯ ಪ್ರಸಿದ್ಧ ಸಂಗೀತ ಕುಟುಂಬದಲ್ಲಿ ಜನ್ಮ ತಾಳಿದರು. ಅವರು ಸ್ವರ್ಗೀಯ ಪಂಡಿತ್ ಬುಂದಿ ಮಹಾರಾಜ್‌ರ ಮೊಮ್ಮಗ ಮತ್ತು ಬನಾರಸ್‌ದಲ್ಲಿಯ ಪ್ರತಿಷ್ಠಿತ ಗುರು ಸ್ವರ್ಗೀಯ ಪಂಡಿತ್ ದಾಮೋದರ್ ಮಿಶ್ರಾರವರ ಪುತ್ರ. ತಾತ ಮತ್ತು ತಂದೆಯ ಸುಯೋಗ್ಯ ನೇತೃತ್ವದ ಕಾರಣದಿಂದ ಇವರಿಗೆ ಖ್ಯಾಲ್ ಗಾಯಕಿ, ಠುಮರಿ ಮತ್ತು ಭಜನೆ ಹಾಡುವುದರಲ್ಲಿ ಅಸಾಧಾರಣವಾದ ಮತ್ತು ಸಹಜವಾದ ಪ್ರದರ್ಶನ ಸಾಮರ್ಥ್ಯ ಬಂದಿತು. ಅವರ ಧ್ವನಿ ಮಧುರವಾಗಿದೆ. ಅವರ ಮಧುರ ಧ್ವನಿ ಅವರ ಬೆಳವಣಿಗೆಗೆ ಸಹಾಯ ಮಾಡಿದೆ. ಅವರ ಮಾನ್ಯತೆಗೆ ದೇಶದ ವಿವಿಧ ಭಾಗಗಳಲ್ಲಿ ನಡೆಸಿದ ಅವಿಸ್ಮರಣೀಯ ಮತ್ತು ಆತ್ಮಾನುಸಂಧಾನದ ಕಛೇರಿಗಳು ಕಾರಣವಾದವು. ಅನೇಕ ಪ್ರತಿಷ್ಠಿತ ಬಹುಮಾನಗಳು ಮತ್ತು ಪದವಿಗಳು ಅವರಿಗೆ ಸಂದಿವೆ. ಅವುಗಳಲ್ಲಿ ಸುರಮಣಿ ಪ್ರಶಸ್ತಿ ಮತ್ತು ಸಂಗೀತರತ್ನ ಪ್ರಶಸ್ತಿ ಇವೆ. ನಮ್ಮ ದೇಶದ ಅನೇಕ ರಾಜ್ಯಗಳು ನಾಗರಿಕ ಸನ್ಮಾನ ಕೊಡುವುದರ ಮೂಲಕ ಅವರನ್ನು ಗೌರವಿಸಿವೆ. ಮಿಶ್ರಾರವರ ಸಂಗೀತದ ವಿಶಿಷ್ಠತೆ ರಾಗಗಳನ್ನು ಅದ್ಭುತವಾಗಿ ಹೊರಹೊಮ್ಮಿಸುವುದಾಗಿದೆ. ಅಲ್ಲದೆ ಸಂಕೀರ್ಣ ತಾನಗಳನ್ನು ಲಯಕ್ರಿಯೆಗಳನ್ನು ಮತ್ತು ಉಪಜ್‌ಗಳನ್ನು ಅದ್ಭುತವಾಗಿ ಅಭಿವ್ಯಕ್ತಿಗೊಳಿಸುವುದರಲ್ಲಿ ಅವರಿಗೆ ಅಪಾರವಾದ ಸಾಮರ್ಥ್ಯವಿದೆ. ಅಲ್ಲದೆ ಮಿಶ್ರಾರವರು ಅನೇಕ ಭಜನೆಗಳನ್ನು ಮತ್ತು ಗೀತೆಗಳನ್ನು ರಚಿಸಿದ್ದಾರೆ. ಇವು ಅವರ ಸಹಜವಾದ ಧ್ವನಿಯ ಏರಿಳಿತದಲ್ಲಿ ಸಾಕ್ಷಾತ್ಕರಿಸಿಕೊಂಡಿವೆ.

ಸಂಗೀತ ಕಲಾವಿದರು – ೧೬

ವಯೋಲಿನ್ ವಾದಕ : ಪಂಡಿತ ಡಿ.ಕೆ. ದಾತಾರ್

ಭಾರತದ ಪ್ರಮುಖ ಮತ್ತು ಮುಂಚೂಣಿಯ ವಯೋಲಿನ್ ವಾದಕರಲ್ಲಿ ಒಬ್ಬರು ಪಂಡಿತ ಡಿ.ಕೆ. ದಾತಾರ್. ಇವರು ೧೯೩೨ ಅಕ್ಟೋಬರ್‌ನಲ್ಲಿ ಜನಿಸಿದರು. ಇವರು ಪ್ರಕಾಂಡ ವಿದ್ವಾನ್ ಪಂಡಿತ ವಿಷ್ಣು ದಿಗಂಬರ ಪಲುಸ್ಕರರ ಪರಂಪರೆಗೆ ಸೇರಿದವರಾಗಿದ್ದಾರೆ. ಪಂಡಿತ ದಾತಾರ್‌ರವರು ದಿವಂಗತ ಡಿ.ವಿ.ಪಲುಸ್ಕರವರ ನಿಕಟ ಸಂಬಂಧಿ. ದಾತಾರ್‌ರವರು ತಮ್ಮ ಪ್ರಾರಂಭಿಕ ಶಿಕ್ಷಣವನ್ನು ವಯೋಲಿನ್ ತಜ್ಞ ದಿವಂಗತ ವಿಘ್ನೇಶ್ವರಶಾಸ್ತ್ರಿಯವರಿಂದ ಪಡೆದರು. ಮುಂದಿನ ಶಿಕ್ಷಣವನ್ನು ಪಲುಸ್ಕರರವರಿಂದ ಪಡೆದರು. ಇವರ 'ಗಾಯಕಿ' ಪ್ರಕಾರದ ನುಡಿಸುವಿಕೆ ತೀರ ಅಪರೂಪದ ವಿಶಿಷ್ಟ ಶೈಲಿಯದಾಗಿರುತ್ತದೆ. ಇವರ ವಯೋಲಿನ್ ವಾದ್ಯದ ಉಪಯೋಗದ ಕ್ರಮವನ್ನು ಶಾಸ್ತ್ರೀಯ ರಾಗಗಳ ಸರಾಗ ನುಡಿಸುವಿಕೆಯ ಜೊತೆಗೆ ಮಾತ್ರ ಹೋಲಿಸಬಹುದು. ಶಾಸ್ತ್ರೀಯ ಪದ್ಧತಿಗನುಗುಣವಾಗಿ ಸುಸಂಬದ್ಧ ರೀತಿಯಲ್ಲಿ ರಾಗಗಳನ್ನು ಪ್ರಸ್ತುತಪಡಿಸುವಲ್ಲಿ ಇವರು ಸುಪ್ರಸಿದ್ಧರಾಗಿದ್ದಾರೆ. ಅಷ್ಟೇ ಅಲ್ಲ, ಠುಮರಿ ಮತ್ತು ಇತರೆ ಲಘು ಸಂಗೀತದ ಪ್ರಕಾರಗಳನ್ನು ನುಡಿಸುವುದರಲ್ಲಿಯೂ ಪರಿಣತಿ ಸಾಧಿಸಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಪ್ರತಿಷ್ಠಿತ ಅನೇಕ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೆ ತಾನ್‌ಸೇನ್ ಉತ್ಸವ, ಸಂಗೀತ ನಾಟಕ ಅಕಾಡೆಮಿ ಕಛೇರಿಗಳಲ್ಲಿಯೂ ಭಾಗವಹಿಸಿದ್ದಾರೆ.

ಗಾಂಧೀ ಮತ್ತು ಟಾಲ್‌ಸ್ಟಾಯ್

– ಪ್ರೋ. ಯು.ಆರ್ ಅನಂತಮೂರ್ತಿ

(ಪ್ರೋ.ಯು.ಆರ್. ಅನಂತಮೂರ್ತಿಯವರು 'ಆಧುನಿಕ ವಿಜ್ಞಾನಕ್ಕೆ ಗಾಂಧೀ ಸವಾಲು' ಕೃತಿಯನ್ನು 23–12–2003 ರಂದು ಬಿಡುಗಡೆ ಮಾಡಿ ಆಡಿದ ಮಾತುಗಳ ಸರಾಂಶ)

ಪ್ರೋ. ಸುನಿಲ್‌ಕಮಾರ್ ಸಹಸ್ರಬುಧೆ ಜೊತೆಗಿನ ನನ್ನ ಸ್ನೇಹ ಬಹಳ ಹಳೆಯದು. ಅವರು ಗಾಂಧೀಯನ್ನು ಕೇವಲ ಪೂಜ್ಯ ಭಾವನೆಯಿಂದಲ್ಲದೆ ಒಬ್ಬ ತತ್ವಜ್ಞಾನಿಯ ತರಹ ನೋಡುತ್ತಾರೆ. ಅವರು ಸ್ವತಃ ವಿಜ್ಞಾನಿಯೂ ಆಗಿರುವುದರಿಂದ ವಿಜ್ಞಾನದ ಎಲ್ಲ ಶಿಸ್ತುಗಳನ್ನು ಬಳಸಿಕೊಂಡು ಗಾಂಧೀಯನ್ನು ಅಧ್ಯಯನ ಮಾಡಿದ್ದಾರೆ. ಒಬ್ಬ ತತ್ವಜ್ಞಾನಿಯ ಶಿಸ್ತನ್ನು, ವಿಜ್ಞಾನಿಯ ಶಿಸ್ತನ್ನು ಮತ್ತು ಸಮಾಜಶಾಸ್ತ್ರಜ್ಞನ ಶಿಸ್ತನ್ನೂ ಇಟ್ಟುಕೊಂಡು ಅವರು ಗಾಂಧೀಯನ್ನು ನೋಡುತ್ತಾರೆ.

ಈ ಪುಸ್ತಕದ ಬಹಳ ಮುಖ್ಯವಾದ ಒಳನೋಟವೊಂದನ್ನು ಮೊದಲು ಹೇಳಿಬಿಡುತ್ತೇನೆ: ಗಾಂಧೀಯವರು ತಮ್ಮ ಎಲ್ಲ ನೈತಿಕ ಪ್ರೇರಣೆ ಮತ್ತು ತಾತ್ವಿಕತೆಯನ್ನು ಪಡೆಯುವುದು–ಬದುಕಿನ ಸಾಮಾನ್ಯತೆಯಿಂದ. ಪ್ರತಿಯೊಬ್ಬ ಗೃಹಸ್ಥನಿಗೂ, ಗೃಹಿಣಿಗೂ ಗೊತ್ತಿರುವ ಎಲ್ಲ ತಾಕಲಾಟ, ಗೋಜು, ಸಂಕಷ್ಟಗಳಿಗೆ, ನಮ್ಮ ದಿನನಿತ್ಯದ ಸಂಕಟಗಳಿಗೆ ಗಾಂಧೀಜಿ ಸ್ಪಂದಿಸಬಲ್ಲರು. ನಮ್ಮ ಮಲೆನಾಡಿನಲ್ಲಂತೂ ಗೃಹಿಣಿಯ ದಿನನಿತ್ಯದ ಸಂಕಷ್ಟಗಳು ಕಟ್ಟಿಗೆಯಿಂದಲೇ ಪ್ರಾರಂಭವಾಗುತ್ತವೆ. ಇಬ್ಬರು ಗೃಹಿಣಿಯರು ಸಂಧಿಸಿದಾಗ ಅವರು ಮಾತನಾಡುವುದು ಮನೆಯ ಸೌದೆ/ ಕಟ್ಟಿಗೆಯ ಕುರಿತಾಗಿ. 'ನಿಮ್ಮ ಮನೆ ಕಟ್ಟಿಗೆ ಒಣಗಿದೆಯೇ? ನಮ್ಮ ಮನೆ ಸೌದೆ ಇನ್ನೂ ಹಸಿ....' ಇತ್ಯಾದಿ. ಹೀಗೆ ಗಾಂಧೀಜಿಯವರ ನೈತಿಕತೆ ಬಂದಿರುವುದು ಸಾಮಾನ್ಯ ಜನರ ಅಗತ್ಯಗಳನ್ನು ಕಂಡು. ಅವರ ಗ್ರಹಿಕೆಗಳೆಲ್ಲ ಬಂದಿರುವುದು ಈ ನೆಲೆಯಿಂದಲೇ. ವಿಜ್ಞಾನದ ಗ್ರಹಿಕೆ ಕೂಡ ಗಾಂಧೀಜಿಗೆ ಸಾಮಾನ್ಯನೊಬ್ಬನು ಅದನ್ನು ಗ್ರಹಿಸುವ ದೃಷ್ಟಿಯಿಂದಲೇ ಬಂದಿರುವಂಥದು.

ಅಷ್ಟೇ ಅಲ್ಲ; ಗಾಂಧಿಯೂ ಒಬ್ಬ ಸಾಮಾನ್ಯ ಮನುಷ್ಯನೇ ತಾನೆ? ಅದಕ್ಕೇ ಆ ಗ್ರಹಿಕೆ ಸಾಧ್ಯ. ಸಾಮಾನ್ಯನ ರೀತಿ ಬದುಕುವುದು ಸಾಧ್ಯ ಎಂದು ಗಾಂಧಿ ತಿಳಿದಿದ್ದರು. ಏಕೆಂದರೆ ಅವರು ನಮ್ಮ ಹಾಗೆ ಸುಳ್ಳು ಹೇಳಿದ್ದಾರೆ. ರಟ್ಟೆಗೆ ಬಲ ಬರಲಿ ಎಂದು ಮಾಂಸ ತಿಂದಿದ್ದಾರೆ, ಕಾಮೋದ್ರಿಕ್ತರಾಗಿ ವೇಶ್ಯಾಗೃಹಕ್ಕೆ ಹೋಗಿದ್ದಾರೆ. ಯಾವುದೋ ಬ್ರಿಟಿಷ್ ಹುಡುಗಿ ತನ್ನನ್ನು ಪ್ರೀತಿಸುತ್ತಾಳೆ ಎಂದು ಗೊತ್ತಾದಾಗ–ತಮಗೆ ಮದುವೆ ಆಗಿದ್ದನ್ನು ಹೇಳದೇ ಇದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ ನಮಗೆ ನಮ್ಮ ಮುಜುಗರಗಳನ್ನು ಹೇಳಿಕೊಳ್ಳಲು ಆಗುವುದಿಲ್ಲ. ಅವುಗಳನ್ನು ಮುಚ್ಚಿಡುವುದಕ್ಕೆ ನೋಡುತ್ತೇವೆ. ಆದರೆ ಗಾಂಧಿ ತನ್ನ ಮುಜುಗರಗಳನ್ನು ಮುಚ್ಚಿಡುವುದಿಲ್ಲ.

ಗಾಂಧೀಜಿಯವರ ಆತ್ಮಕಥೆಯನ್ನೇ ನೋಡಿ. ಅವರು ಇಂಗ್ಲೆಂಡಿನಲ್ಲಿ ಹೋಗಿ ಇಳಿದ ಕೂಡಲೇ ಅಲ್ಲಿನ ಭಾರತೀಯರ ನಡುವೆ ದೊಡ್ಡ ಮನುಷ್ಯ ಎನ್ನಿಸಿಕೊಂಡ ಒಬ್ಬರನ್ನು ನೋಡುವುದಕ್ಕೆ ಹೋಗುತ್ತಾರೆ. ಆ ಉದ್ಯಮಿಯ ಹತ್ತಿರ ಒಂದು ಉಣ್ಣೆಯ ಟೋಪಿ

ಇರುತ್ತದೆ. ಬಹಳ ಮೃದುವಾದ ಉಣ್ಣೆಯಿಂದ ಮಾಡಿದಂತಹ ಟೋಪಿ ಅದು–ಟೇಬಲ್ ಮೇಲೆ ಅದನ್ನು ಅವರು ಇಟ್ಟಿರುತ್ತಾರೆ. ಲಾಯರ್ ಪರೀಕ್ಷೆ ಕಟ್ಟಲು ಹೋಗಿದ್ದ ಹುಡುಗ ಗಾಂಧಿ ತನ್ನ ಕುತೂಹಲ ತಡೆಯಲಾರದೆ ಅದರ ನಯವಾದ ರೋಮಗಳನ್ನು ಬೆರಳಿನಿಂದ ಸವರುತ್ತಾರೆ. (ಗಾಂಧಿಯವರಿಗೆ ಮುಟ್ಟುವುದೊಂದು ಆತ್ಮದ ಹಂಬಲವಿದ್ದಂತೆ ದೇಹದ ತುಡಿತವೆಂದು ಅನ್ನಿಸುತ್ತದೆ. ಅಸ್ಪೃಶ್ಯತೆಯ ಆಚರಣೆ ಅವರಿಗೆ ಅಸಹ್ಯ. ಅವರು ಕೊನೆಯಲ್ಲಿ ಇಬ್ಬರು ಹುಡುಗಿಯರ ಹೆಗಲಮೇಲೆ ಕೈ ಇಟ್ಟು ನಡೆಯುತ್ತ ಇದ್ದರು. ನವಾಖಾಲಿ ದಿನಗಳಲ್ಲಿ ಹುಡುಗಿಯ ಜೊತೆ ಬೆತ್ತಲೆ ಮಲಗಿ ತನ್ನ ಬ್ರಹ್ಮಚರ್ಯವನ್ನು ಪರೀಕ್ಷೆಗೆ ಒಡ್ಡಿಕೊಂಡು ತನ್ನ ಆಪ್ತರ ಟೀಕೆಗೆ ಒಳಗಾಗಿದ್ದರು.) ಗಾಂಧೀಜಿ ಟೊಪ್ಪಿ ಮುಟ್ಟಿದ್ದನ್ನು ನೋಡಿದ ಆ ದೊಡ್ಡ ವ್ಯಕ್ತಿ 'ಇಂಗ್ಲೆಂಡಿನಲ್ಲಿ ನೀನು ಕಲಿಯಬೇಕಾದ ಮೊದಲ ಪಾಠ, ಬೇರೆಯವರ ವಸ್ತುಗಳನ್ನು ಮುಟ್ಟದಿರುವುದು' ಎಂದು ಹೇಳುತ್ತಾನೆ. ಇದನ್ನು ಗಾಂಧೀಜಿ ಸಂಕೋಚವಿಲ್ಲದೆ ಬರೆಯುತ್ತಾರೆ. ಅವರಿಗೆ ಯಾವುದೂ ಸಣ್ಣ ವಿಚಾರವಲ್ಲ; ಯಾವುದೂ ದೊಡ್ಡ ವಿಚಾರವಲ್ಲ.

ಈ ಕನ್‌ಫೆಷನ್ ರೈಟಿಂಗ್‌ನಲ್ಲಿ ಒಂದು ಸಮಸ್ಯೆ ಇದೆ. ಸೇಂಟ್ ಥೆರೇಸಾ ಅಂತ ಒಬ್ಬಳು ಬಹಳ ದೊಡ್ಡ ಕ್ರಿಶ್ಚಿಯನ್ ಸನ್ಯಾಸಿನಿ ಇದ್ದಳು. ತಪ್ಪೊಪ್ಪಿಗೆ ಮಾಡುವಾಗ ಅವಳು ಎಷ್ಟು ದೊಡ್ಡ ಗಂಟಲಲ್ಲಿ ಅದನ್ನು ಮಾಡುತ್ತಾಳೆಂದರೆ 'ಇವತ್ತು ಬ್ರೆಡ್ ಇಷ್ಟ ಆಯ್ತು ಹೆಚ್ಚಿಗೆ ತಿಂದುಬಿಟ್ಟೆ, ಸ್ವಲ್ಪ ಬೆಣ್ಣೆ ಜಾಸ್ತಿ ಹಾಕ್ಕೊಂಡೆ...' ಎನ್ನುವುದರಿಂದ ಹಿಡಿದು ನೂರಾರು ಸಣ್ಣ ಪುಟ್ಟ ತಪ್ಪುಗಳವರೆಗೆ ನಿವೇದನೆ ಮಾಡಿಕೊಳ್ಳುತ್ತಾಳೆ. (ನಂಬಿಕೆಯನ್ನೇ ಅಲ್ಲಾಡಿಸಬಲ್ಲ ತಪ್ಪೊಪ್ಪಿಗೆ ಇದಲ್ಲ.) ತಪ್ಪೊಪ್ಪಿಕೊಳ್ಳುವವರ ಮನಸ್ಸಿನಲ್ಲಿ 'ನಾನು ಮಾಡಿದ ತಪ್ಪುಗಳನ್ನು ಹೇಳಿಕೊಂಡುಬಿಟ್ಟರೆ ಮುಂದೆ ಅಂಥ ತಪ್ಪುಗಳನ್ನು ಮಾಡುವುದಿಲ್ಲ, ನೋಡು ನಾನು ಸ್ವಚ್ಛವಾದೆ' ಎನ್ನುವ ತೋರುಗಾಣಿಕೆ ಇರುವುದು ಸಾಧ್ಯ. ಅಥವಾ ನಾನು ತಪ್ಪೊಪ್ಪಿಗೆ ಮಾಡಿಕೊಳ್ಳುತ್ತಿರುವುದರಿಂದ ನಾನು ಶ್ರೇಷ್ಠವ್ಯಕ್ತಿ ಎನ್ನುವ ಭಾವನೆಯೂ ಇರಬಹುದು. ಅಲ್ಲದೆ ಇಷ್ಟೇ ನನ್ನ ದೋಷ ಎಂದು ಮಹತ್ವದ ದೋಷಗಳನ್ನು ಮುಚ್ಚಿಡುವ ಉಪಾಯವೂ ಇದಾಗಬಹುದು. ಆದರೆ ಒಂದು ತಪ್ಪೊಪ್ಪಿಗೆಯನ್ನು ಈ ಯಾವ ಭಾವನೆಯೂ ಇಲ್ಲದೆ ಬರೆದುಕೊಳ್ಳುವುದು ಸುಲಭವಲ್ಲ. ಸೇಂಟ್ ಅಗಸ್ಟೀನ್ ಬರೆದಿರುವ 'ಕನ್‌ಫೆಷನ್' ಪುಸ್ತಕದಲ್ಲಿ ಅಂಥಾ ನಿರ್ಲಿಪ್ತತೆ ಇದೆ. ಬಹುಷಃ ಅದರ ನಂತರ ಅದೇ ಮಟ್ಟದ ದೊಡ್ಡ ಕೃತಿ ಎಂದರೆ ಗಾಂಧಿಯವರ ಸತ್ಯಾನ್ವೇಷಣೆಯ ಆತ್ಮಕಥೆ. ಇದನ್ನು ಬರೆದಾದ ನಂತರವೂ ಕನಸಿನಲ್ಲಿ ತನಗೆ ಕಾಮೋದ್ರೇಕವಾಗುವುದನ್ನು ಮಹಾತ್ಮರು ಬರೆದುಕೊಳ್ಳಲು ಹಿಂಜರಿಯುವುದಿಲ್ಲ.

ಅಮೇರಿಕದ ಪ್ರಸಿದ್ಧ ವಿಮರ್ಶಕ ಮಾರ್ಟಿನ್ ಗ್ರೀನ್ ಅವರು ಗಾಂಧಿ ಮತ್ತು ಟಾಲ್‌ಸ್ಟಾಯ್ (1828–1910) ಅವರನ್ನು ಹೋಲಿಸಿ ಒಂದು ಗಹನವಾದ ಪುಸ್ತಕ ಬರೆದಿದ್ದಾರೆ. ಟಾಲ್‌ಸ್ಟಾಯ್ ಗಾಂಧಿಗೆ ಬಹಳ ಹತ್ತಿರವಾದಂಥವರು. ಟಾಲ್‌ಸ್ಟಾಯ್ ಕೂಡ ಗಾಂಧಿಯಂತೆಯೇ ಸರಳತೆಯನ್ನು ಹುಡುಕಿಕೊಂಡು ಹೊರಟವರು. ಅವರು ಸರಳತೆಯನ್ನು ಎಷ್ಟು ಹುಡುಕಿದರೆಂದರೆ ಅವರ ಯಾಸ್ನಾ ಪೋಲ್ಯಾನದ ಮನೆಯಲ್ಲಿ ನೋಡಿದರೇ ತಿಳಿಯುತ್ತದೆ. ಅವರದು ಅರಮನೆಯಂಥಹ ದೊಡ್ಡ ಮನೆ. ಈ ಮನೆಯಲ್ಲಿ ಅವರು ತಾನು ಮಲಗುವ ಕೋಣೆಯನ್ನು, ತನ್ನ ಉಡುಗೆ ತೊಡುಗೆಗಳನ್ನು, ತನ್ನ ಆಹಾರವನ್ನು ಬದಲಿಸುತ್ತ ಹೋದರು; ಕೊನೆಗೆ ಕೆಲಸದ ಆಳುಗಳಿಗೆಂದು ಇದ್ದ ಕೋಣೆಯೊಂದರಲ್ಲಿ ಮಲಗಲು ಶುರುಮಾಡಿದರು. ರೈತನ ಪೋಷಾಕನ್ನು ತೊಟ್ಟು ಓಡಾಡಿದರು, ಸಸ್ಯಾಹಾರಿಯಾದರು. ತನ್ನ ಘನವಂತಿಕೆಯೂ, ಆಕರ್ಷಕ

ಸುಂದರಿಯೂ, ಸೂಕ್ಷ್ಮಜ್ಞ ಓದುಗಳೂ ಆದ ಹೆಂಡತಿಗೆ ಕೃತಕವೂ, ಗುರು ಪಟ್ಟದಲ್ಲಿ ಉನ್ನತನಾಗಲು ಪೆದ್ದು ಶಿಷ್ಯಬಳಗದ ಹೊಗಳಿಕೆ ಗಳಿಸುವ ಆತ್ಮಘಾತುಕ ಹುನ್ನಾರವೂ ಎನ್ನಿಸಿದ ಈ ಸರಳತೆಯ ಹುಡುಕಾಟದಲ್ಲಿ ಅವರು ತಮ್ಮ ಹೆಂಡತಿಯ ಜೊತೆ ಗುದ್ದಾಡಿ ಬಳಲಿದರು. ಬದಲಾಗದ ಶ್ರೀಮಂತಿಕೆಯ ಆಸೆಯ ಹೆಂಡತಿಯಿಂದ ಬೇಸತ್ತರು. ತನಗೆ ಶರಣಾದ ಮೊಂಡು ಹಠದ ಶಿಷ್ಯಕೋಟಿಯ ನಿರೀಕ್ಷಣೆಗಳಿಂದ ಜಡ್ಡಾದರು. ಕೊನೆ ಮಗಳು ಮಾತ್ರ ಅಪ್ಪನ ಕಡೆ; ಉಳಿದ ಮಕ್ಕಳು, ಮುಖ್ಯವಾಗಿ ಗಂಡುಮಕ್ಕಳು ಅಮ್ಮನ ಕಡೆ. ಟಾಲ್‌ಸ್ಟಾಯ್ ಹೆಂಡಿತಿಗೆ ಗಂಡನ ಎಲ್ಲ ಗುಟ್ಟುಗಳೂ ತೀಟೆ ತೆವಲುಗಳೂ ಗೊತ್ತಿದ್ದವು, ಅಲ್ಲವೆ? ಬೆತ್ತಲಲ್ಲಿ ತನಗೆ ತಿಳಿದವನು ಅವನು ಅಲ್ಲವೆ? ತನಗಿಂತ ಹದಿನೈದು ವರ್ಷ ಕಿರಿಯಳಾದ ತನ್ನೆಲ್ಲ ಬರವಣಿಗೆಯನ್ನೂ ಅಚ್ಚುಕಟ್ಟು ಮಾಡಿ ಪ್ರಕಟಿಸುತ್ತ ಇದ್ದ ಹೆಂಡತಿಗೆ ತನ್ನೆಲ್ಲ ದೌರ್ಬಲ್ಯಗಳನ್ನೂ ಗಂಡನೇ ಹೇಳಿಕೊಂಡಿದ್ದರು. "ನೀನು ಎಲ್ಲರಿಂಗಿಂತ ಹೆಚ್ಚಿನ ಲೋಲುಪನಾದ ಕಾಮುಕ. ನಿನ್ನ ಸೃಜನಶಕ್ತಿಯ ಮೂಲ ಈ ನಿನ್ನ ಅದಮ್ಯ ಕಾಮದಲ್ಲೇ ಇರುವುದು; ನಿನ್ನ ಸರಳತೆಯ ಸೋಇನಲ್ಲಿ ಅಲ್ಲ" ಎಂದು ಅವಳು ಮೂದಲಿಸುತ್ತ ಇದ್ದಳು– ಅವನ ಭಾವನಾ ಪರವಶ ಶಿಷ್ಯರಿಗೆ ಗೊತ್ತಾಗುವ ಹಾಗೆ. ಅಷ್ಟೇ ಅಲ್ಲ; ಟಾಲ್‌ಸ್ಟಾಯ್ ಒಬ್ಬ ಸಂತನಿರಬಹುದೇನೋ ಎಂಬ ರಷ್ಯನ್ನರ ನಂಬಿಕೆ ಗಾಢವಾಗುತ್ತಿದ್ದ ಕಾಲದಲ್ಲಿ ಆಕೆ ಗರ್ಭಿಣಿಯಾಗುತ್ತ ಇದ್ದಳು. ಟಾಲ್‌ಸ್ಟಾಯ್‌ಗಿಂತ ಕಿರಿಯವಳಾದ ಈ ಮೋಹದ ಹೆಂಡತಿಯೂ ಸಾಮಾನ್ಯಳೇನೂ ಅಲ್ಲ. ಅವಳದೇ ಆದ ಸತ್ಯಪ್ರತಿಪಾದನೆ ಅವಳ ಹಠದಲ್ಲಿ ಇದೆ. ಅವಳು ಕೂಡ ಅವನ ಒಳಗಿನ ಇನ್ನೊಂದು ಸತ್ಯ. ಅನ್ನಾ ಕೆರನೀನಾದಂತಹ ಕೃತಿಯನ್ನು ಸೃಷ್ಟಿಸಿದವನಿಗೆ ತನ್ನ ಒಳಗೇ ಗೊತ್ತಿದ್ದ ಸತ್ಯ.

ಸಂಸಾರ ಜೀವನದ ಶ್ರೀಮಂತಿಕೆಯನ್ನು, ಆಕರ್ಷಣೆಗಳನ್ನು ತಾಳಲಾರದೆ ಕೊನೆಯಲ್ಲಿ ಮುದುಕ ಟಾಲ್‌ಸ್ಟಾಯ್ ತನ್ನ 82ನೇ ವಯಸ್ಸಿನಲ್ಲಿ ಹೆಂಡತಿಯನ್ನು ಬಿಟ್ಟು, ಅರಮನೆಯಂಥ ಮನೆಯನ್ನು ಬಿಟ್ಟು, ಆಸ್ತಿಯನ್ನು ತ್ಯಜಿಸಿ ರೈತರ ಪೋಷಾಕು ತೊಟ್ಟು ಹೊರಬೀಳುತ್ತಾರೆ. ಇದು ಪುರಾತನರ ಪದ್ಧತಿಯಂತೆ ಸನ್ಯಾಸಕ್ಕಿಂತ ಮುಂಚಿನ ತನ್ನ ವಾನಪ್ರಸ್ಥವೆಂದು ಹೆಂಡತಿಗೊಂದು ಕಾಗದ ಬರೆದಿಟ್ಟು ಬೆಳಗಾಗುವ ಮುಂಚೆ ಮನೆ ತೊರೆಯುತ್ತಾರೆ. ಎಲ್ಲೆಲ್ಲೋ ಅಲೆದು ಅಲೆದು ಕೊನೆಗೆ ರೈತ ಪೋಷಾಕಿನಲ್ಲಿ ಎಲ್ಲೋ ಒಂದು ರೈಲ್ವೇ ಸ್ಟೇಷನ್‌ನಲ್ಲಿ ಕುಳಿತು ರೈಲ್‌ಗಾಗಿ ಕಾಯುತ್ತಿದ್ದಾಗ ಖಾಯಿಲೆ ಬೀಳುತ್ತಾರೆ, ಜಗತ್ತಿನಲ್ಲೇ ಖ್ಯಾತನಾಗಿದ್ದ ಸಾಹಿತಿ ಒಬ್ಬ ಬೀದಿಹೋಕನಂತೆ ಆಸ್ಪತ್ರೆಗೆ ದಾಖಲಾಗುತ್ತಾರೆ. ಇಲ್ಲೂ ಅವರ ಹೆಂಡತಿ ಟಾಲ್‌ಸ್ಟಾಯ್ ಅವರನ್ನು ನೋಡುವುದಕ್ಕೆ ಬಯಸುತ್ತಾಳೆ. 'ಎಲ್ಲವನ್ನೂ ಬಿಟ್ಟು ಮುಕ್ತವಾಗಿ ಅವರು ಸಾಯ್ತಾ ಇದ್ದಾರೆ, ನೀನು ಹೋಗುವುದು ಬೇಡ' ಎಂದು ಯಾರು ಹೇಳಿದರೂ ಅವಳು ಕೇಳುವುದಿಲ್ಲ. ತನಗೆ ಗೊತ್ತಿರುವ ಅವನು ಮಾತ್ರ ನಿಜವೆಂದು ಜಗತ್ತಿಗೆ ಸಾರಲು ಅವಳು ಅಂಜುವುದಿಲ್ಲ. ಆಕೆ ಎಷ್ಟು ಹಠದ ಹೆಂಗಸೆಂದರೆ– ಟಾಲ್‌ಸ್ಟಾಯ್ ಮಲಗಿದ್ದ ರೂಮಿನ ಹೊರಗೆ ನಿಂತು ಅಲ್ಲಿಂದ ಹೊರಬರುತ್ತ ಇರುವಳೆಂದು ಭಾಸವಾಗುವಂತೆ ಫೋಟೋ ತೆಗೆಸಿಕೊಳ್ಳುತ್ತಾಳೆ ಎಂದು ಓದಿದ ನೆನಪು ನನಗೆ.

ಅದು ಮಾಧ್ಯಮದವರು ಮೇಲೆ ಬರುತ್ತಿದ್ದ ಕಾಲ. ಅಮೇರಿಕಾದಿಂದ ಕ್ಯಾಮೆರಾ ಹಿಡಿದುಕೊಂಡು ಈ ದೃಶ್ಯವನ್ನು ಸೆರೆಹಿಡಿಯಲು ಮಾಧ್ಯಮದವರು ಬಂದಿರುತ್ತಾರೆ.... ಜಗತ್ತಿನ ಒಬ್ಬ ದೊಡ್ಡ ಸಾಹಿತಿ ಹೀಗೆ ತನ್ನ ಇನ್ನೊಂದು ಸಾಧ್ಯತೆಯ ಹುಡುಕಾಟದಲ್ಲಿ ಸತ್ತ.

ಈ ಟಾಲ್‌ಸ್ಟಾಯ್ ಗಾಂಧಿಗೆ ಪ್ರಿಯನಾದ. ಗಾಂಧಿ ಟಾಲ್‌ಸ್ಟಾಯ್‌ಗೂ ಪ್ರಿಯನಾದ. ದಕ್ಷಿಣ ಆಫ್ರಿಕಾದಲ್ಲಿ ತನ್ನ ಪ್ರಯೋಗಗಳನ್ನು ಗಾಂಧಿ 'ಟಾಲ್ಸ್‌ಟಾಯ್ ಫಾರ್ಮ್' ಎಂದೇ ಶುರು ಮಾಡಿದರು.

ಟಾಲ್ಸ್‌ಟಾಯ್ ತಾನು ಮೆಚ್ಚುವ ಗಾಂಧಿ ಬಗ್ಗೆ ಒಂದು ಮಾತು ಬರೆಯುತ್ತಾರೆ– 'ಈತನ ರಾಷ್ಟ್ರಪ್ರೇಮ ಮಾತ್ರ ಅವನ ಸರಳತೆ ಸತ್ಯಗಳ ಹುಡುಕಾಟದಲ್ಲಿ ಅಡ್ಡಿಯಾಗಬಹುದು' ಎಂದು.... ಆದರೆ ಗಾಂಧಿಗೆ ಸಂತತನದ ಹುಡುಕಾಟ ಟಾಲ್‌ಸ್ಟಾಯ್‌ದಕ್ಕಿಂತ ಭಿನ್ನವಾದ್ದು. ರಾಜಕಾರಣದ ಕೊಳಚೆ ಪ್ರದೇಶದಲ್ಲಿ ಇದ್ದು ಅವರು ಸಂತರಾದ್ದು, ಅದೇ ಅವರ ವಿಶೇಷ; ಟಾಲ್‌ಸ್ಟಾಯ್‌ರಂತೆ ಎಲ್ಲವನ್ನು ಕಳಚಿಕೊಂಡ ನಿರ್ಲಿಪ್ತತೆಯಲ್ಲಿ ಅಲ್ಲ. ನಮ್ಮ ದೇಸವನ್ನು ದಾಸ್ಯದಿಂದ ಬಿಡುಗಡೆ ಮಾಡುವ ಮೂಲಕವೇ ಗಾಂಧಿಗೆ ಸತ್ಯದ ದರ್ಶನವಾಗಬೇಕು. ಟಾಲ್ಸ್‌ಟಾಯ್ ಏನನ್ನು ಮಡುವುದಕ್ಕೆ ಲೆನಿನ್ ಬೆಳೆಯುತ್ತ ಇದ್ದ ರಷ್ಯದಲ್ಲಿ ಸಾಧ್ಯವಾಗಲಿಲ್ಲವೋ ಗಾಂಧಿ ಅದನ್ನು ಸಾಧಿಸಿದರು. ಅಥವಾ ಸಾಧಿಸಲು ಯತ್ನಿಸಿ ಟಾಲ್ಸ್‌ಟಾಯ್‌ರಂತೆಯೇ ಸೋತು ಗೆದ್ದರು.

ಟಾಲ್ಸ್‌ಟಾಯ್ ಎಂಥಾ ದೊಡ್ಡ ಲೇಖಕ; ಆದರೂ ತಾನು ಬರೆದಿದ್ದೆಲ್ಲಾ ಪೊಳ್ಳು ಎಂದು ನಮಗೆ ಅದು ನಿಜವೆನ್ನಿಸದಂತೆ, ಹೆಂಡತಿಗೂ ನಿಜವೆನ್ನಿಸದಂತೆ ಭಾವಿಸಿದ್ದರು. ಆಮೇಲೆ ಜನಸಾಮಾನ್ಯರಿಗೆ ಗೊತ್ತಾಗಲಿ ಎಂದು ಸರಳವಾದ ನೀತಿ ಕಥೆಗಳನ್ನು ಬರೆದರು. ಶೇಕ್ಸ್‌ಪಿಯರನನ್ನು ಜರೆದರು. ಆದರೆ ನಿಜದಲ್ಲಿ ಟಾಲ್‌ಸ್ಟಾಯ್ ಕಿಂಗ್ ಲಿಯರ್‌ನಂತಹ ಮನುಷ್ಯನೇ ಎಂದು ಆರ್ವೆಲ್ ಟೀಕಿಸಿದರು.

ಗಾಂಧಿಯನ್ನು ಮೆಚ್ಚಿಕೊಂಡಿರುವ ಮಾರ್ಟಿನ್ ಗ್ರೀನ್ ಕೂಡಾ ಒಂದು ಮಾತನ್ನು ಹೇಳುತ್ತಾರೆ. "ಗಾಂಧಿಯಲ್ಲಿ ಒಂದು ಅಪಾಯ ಇದೆ. ಅದೇನೆಂದರೆ – ಒಬ್ಬ ಇಂಟೆಲೆಕ್ಚುಯಲ್ ಆಗುವುದಕ್ಕೆ ಗಾಂಧಿಯಲ್ಲಿ ಅವಕಾಶವಿಲ್ಲ." ವೈಚಾರಿಕತೆಯಲ್ಲಿ ಖುಷಿ ಕಾಣುವುದೂ ಒಂದು ಬಗೆಯ ಲೋಲುಪತೆಯೇ. ಆದರೆ ಸಹಸ್ರ ಬುಧೆಯವರು ಈ ಪುಸ್ತಕದಲ್ಲಿ ಗಾಂಧಿಯ ಒಳಗಿದ್ದ ಒಬ್ಬ ಅಸಾಮಾನ್ಯ ಧೀಮಂತನನ್ನು ಕಂಡಿದ್ದಾರೆ. ಎಲ್ಲಿ ಇಂಟೆಲೆಕ್ಚುಯಾಲಿಟಿಯ ಮೇಲಾಟಗಳಿಗೆ ಅವಕಾಶವಿಲ್ಲವೆಂಬಂತೆ ತೋರುತ್ತದೋ ಅಲ್ಲಿ ಇಂಟೆಲೆಕ್ಚುಯಾಲಿಟಿ, ಅಂದರೆ ತಾಜಾ ಆದ ಇಂಟೆಲೆಕ್ಚುಯಾಲಿಟಿ, ಇರುವುದನ್ನು ಅವರ ಕಂಡಿದ್ದಾರೆ. ಸಹಸ್ರ ಬುಧೆಯನ್ನು ಓದುತ್ತ ಇದ್ದಂತೆ ಇದನ್ನು ಮಾರ್ಟಿನ್ ಗ್ರೀನ್ ಗಮನಕ್ಕೆ ತರಬೇಕೆಂದು ನನಗೆ ಅನ್ನಿಸಿತು.

ಗಾಂಧೀಜಿಯವರು ತಮ್ಮ ನೈತಿಕತೆಯನ್ನು ಸಾಮಾನ್ಯ ಜೀವನದಿಂದ ಪಡೆಯುತ್ತಾರೆ ಎಂದೆ. ಅದಕ್ಕಿಂತ ಹೆಚ್ಚಾಗಿ ಜೀವನದ ಸಾಮಾನ್ಯತೆಯಿಂದ ಪಡೆಯುತ್ತಾರೆ ಎನ್ನುವುದು ಹೆಚ್ಚು ಸಮಂಜಸ. ವಿಜ್ಞಾನದ ಬಗ್ಗೆ ಅವರ ಅಭಿಪ್ರಾಯ ಹೀಗಿದೆ. 'ಈ ಅಣುವನ್ನು ಒಡೆಯೋದಕ್ಕೆ ಸಾಧ್ಯ' ಎಂದು ಹೇಳಿದವನು ಐನ್‌ಸ್ಟೀನ್. ಅಣುವನ್ನು ಒಡೆದಾಗ $E=mc^2$ ನಷ್ಟು ದೊಡ್ಡ ಪ್ರಮಾಣದ ಶಕ್ತಿ ಉತ್ಪಾದನೆಯಾಗುತ್ತದೆ ಎಂದು ಹೇಳಿದನಲ್ಲಾ ಅದು ವಿಜ್ಞಾನ; ಸತ್ಯದ ನಿರ್ಲಿಪ್ತ ತಿಳುವಳಿಕೆ. ಆದರೆ ಒಡೆಯಬಹುದಾದ ಅಣುವಿನಿಂದ ಬಾಂಬ್ ತಯಾರಿಸಬಹುದು ಎಂಬುದನ್ನು ತೋರಿಸಿಕೊಟ್ಟು ವಿಜ್ಞಾನವನ್ನು ತಂತ್ರಜ್ಞಾನಕ್ಕೆ ಅಳವಡಿಸಿದವನು ರಾಬರ್ಟ್ ಓಪನ್ ಹೈಮರ್. ಅವನಂಥವರು ವಿಚಾರದಲ್ಲಿ ಆಸಕ್ತರು ಮಾತ್ರವಲ್ಲ; ವಿಲಾಸಿಗಳು. ಅಣು ಸ್ಫೋಟವನ್ನು ಕಣ್ಣಾರೆ ಕಂಡು (ಕಾಣದೇ ಇರಲು ಸಾಧ್ಯವೇ?) ವಿಸ್ಮಯದಲ್ಲಿ ಅವನು ಗೀತೆಯನ್ನು ಉದ್ಧರಿಸುತ್ತಾನೆ–ವಿಶ್ವರೂಪ ದರ್ಶನವಾದಾಗ ಅರ್ಜುನನಿಗೆ ಸಹಸ್ರ ಸೂರ್ಯರನ್ನು

ಕಂಡಹಾಗೆ ಆಯಿತು ಎನ್ನುವ ಮಾತನ್ನು. ಅದು ಜಗತ್ತನ್ನೇ ನಾಶ ಮಾಡಬಲ್ಲ ಸ್ಫೋಟ ಎಂದು ಗೊತ್ತಿದ್ದರೂ ಅವನು ಅದನ್ನು ಯಾಕೆ ತಯಾರು ಮಾಡಿದ? ಇದಕ್ಕೆ ಒಬ್ಬರು ಹೇಳುತ್ತಾರೆ : 'ವಿಜ್ಞಾನಿಗೆ ಇಂಥದ್ದೊಂದು ವಿಷಯ ನಿಜ ಎಂದು ಗೊತ್ತಾದ ಮೇಲೆ ಅದು ಎಷ್ಟು ನಿಜ ಎಂದು ತಿಳಿಯದೇ ಸುಮ್ಮನಿರಲಾರ'. ಗಾಂಧಿ ಇದನ್ನೇ, ಈ ಕುತೂಹಲವನ್ನೇ, 'ಆಸುರಿ' ಎನ್ನುತ್ತಾರೆ.

ಅಷ್ಟೇ ಅಲ್ಲ; ಈ ಬಾಂಬ್ ಸ್ಫೋಟವಾದ ಮೇಲೆ ಅಮೇರಿಕನ್ನರು ಜಪಾನಿನಲ್ಲಿ ಎರಡು ಆಸ್ಪತ್ರೆಗಳನ್ನು ಮಾಡಿದರಂತೆ. ರೇಡಿಯೇಶನ್‌ನಿಂದ ನರಳುವವರನ್ನು ಗುಣ ಮಾಡುವುದಕ್ಕಳವಂತೆ ಆ ಆಸ್ಪತ್ರೆಗಳನ್ನು ಮಾಡಿದ್ದು; ಈ ವಿಕಿರಣದ ಪರಿಣಾಮಕ್ಕೆ ಒಳಗಾದವರ ಚರ್ಯೆ ಹೇಗಿರುತ್ತದೆ ಎನ್ನುವುದನ್ನು ತಿಳಿಯುವುದಕ್ಕಂತೆ. ವಿಜ್ಞಾನ ಅಸುರಿಯಾಗುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ. ನಮ್ಮೆಲ್ಲರಲ್ಲೂ ಅಡಗಿರುವ ಜೈನ ತಿಳುವಳಿಕೆಯಾದ 'ಸಂಕಲ್ಪ ಹಿಂಸೆ' ಈ ಅಸುರಿತನದ ಮೂಲದಲ್ಲಿ ಇರುವುದು.

ನಮ್ಮ ದೇಶದಲ್ಲೂ ಬಾಂಬ್ ಸ್ಫೋಟವಾಯ್ತು. ನಮ್ಮ ಕವಿಗಳಾದ ಪ್ರಧಾನಿಗಳು ಅದೇನೋ 'ಬುದ್ಧಸ್ಮಿತ' ಎಂದು ಹೇಳಿದರು. ನಮ್ಮ ವಿಜ್ಞಾನಿಗಳೂ ಖುಷಿಯಾಗಿಬಿಟ್ಟರು– ನಾವೂ ಒಂದು ಬಾಂಬ್ ಮಾಡಿಬಿಟ್ಟೆವು ಎಂದು. ಆದರೆ ಅದರಿಂದ ಮೂರು ಕಾಸಿನ ತಿಳುವಳಿಕೆ ಏನೂ ಹೆಚ್ಚಾಗಲಿಲ್ಲ.

ಆದರೂ ಸ್ಫೋಟ ಮಾಡಬೇಕು. ಅದನ್ನು ನೋಡಬೇಕು. ಅದು ಚಾಲ್ತಿಗೆ ಬಂದ ನಂತರ ಅದರ ಪರಿಣಾಮಗಳನ್ನು ನೋಡಬೇಕು. ಅದರಿಂದ ಸಾವಿರಾರು ಜನ ಸಾಯುತ್ತಾ ಇದ್ದರೆ ಅವರು ಹೇಗೆ ಸಾಯುತ್ತಾರೆ ಎನ್ನುವುದನ್ನು ನೋಡಬೇಕು. ಇದು ಹಿಂಸೆ; ಇದು ವಿಜ್ಞಾನ ಹುಟ್ಟು ಹಾಕುವಂತಹ ಹಿಂಸೆ. ಜೈನರು ತಿಳಿಯುವಂತೆ ಇದು ನಾನು ಮೇಲೆ ಹೇಳಿದ ಸಂಕಲ್ಪ ಹಿಂಸೆ. ಹಿಪ್ಪಿ ಕೂದಲಿನ, ಮಗುವಿನ ಮುಗ್ಧತೆಯ ನಮ್ಮ ಸಸ್ಯಾಹಾರಿ ರಾಷ್ಟ್ರಪತಿಯಲ್ಲೂ ಕಾಣಿಸಿಕೊಳ್ಳುವ ಹಿಂಸೆ. ಬಾಂಬ್ ಮಾಡಿದರೆ ಸಾಕೆ? ಅದನ್ನು ರವಾನಿಸುವ ಕ್ಷಿಪಣಿಗಳನ್ನೂ ನಾವು ತಯಾರಿಸುವುದು ಅಗತ್ಯಲ್ಲವೆ? ಎಂದವರು ನಮ್ಮ ಮೆಚ್ಚುಗೆಯ ಅಬ್ದುಲ್ ಕಲಾಮರು. ಕೈಯಾರೆ ಒಂದು ಇಲಿಯನ್ನು ಕೊಲ್ಲಲು ಒಲ್ಲದವರು.

ಹಿಂಸೆಯ ಮಾತು ಬಂದಾಗ ನೆನಪಾಗುತ್ತದೆ. ನಮ್ಮಲ್ಲಿ ಹಿಂಸೆ ಹೇಗೆ ಸೆಲಬ್ರೇಟ್ ಆಗುತ್ತೆ ನೋಡಿ. ನಮ್ಮ ಮಾಧ್ಯಮಗಳಿಗೆ ಹಿಂಸೆ ಹಬ್ಬ. ಒಂದು ಅಪಘಾತ ಅಂದರೆ ಕೇವಲ ವರದಿ ಇರುವುದಿಲ್ಲ. ಸತ್ತವನ ಬುರುಡೆ ಒಡೆದಿರುವುದು, ರಕ್ತ ಎಲ್ಲದರ ಚಿತ್ರವನ್ನೂ ಹಾಕುತ್ತಾರೆ. ಏನಾದರೂ ಇಂಥದ್ದೊಂದು ಆಯ್ತು ಎಂದರೆ ಕ್ಯಾಮೆರಾಮನ್‌ಗೆ ಇರುವ ದೊಡ್ಡ ಅವಕಾಶ ಅದು.

ನಾನು ಇಂಗ್ಲೆಂಡಿನಲ್ಲಿ ಓದಿದವನು. ಇಂಗ್ಲೆಂಡ್ ಬಗ್ಗೆ ಬಹಳ ಗೌರವ ಇತ್ತು. ಮೊನ್ನೆ ಬಿ.ಬಿ.ಸಿ.ಯಲ್ಲಿ ಸದ್ದಾಂ ಹುಸೇನನನ್ನು ಹಿಡಿದಿದ್ದ ಚಿತ್ರವನ್ನು ನೋಡಿದೆ. ಪ್ರತಿಯೊಂದು ನಿಮಿಷವೂ ಅದನ್ನೇ ತೋರಿಸುತ್ತಿದ್ದರು. ಆ ಸದ್ದಾಂ ಹುಸೇನ್ ಗಡ್ಡ ಬಿಟ್ಟಿದ್ದಾನೆ; ಮುಖವೆಲ್ಲಾ ಕೊಳಕಾಗಿದೆ. ರೋಗಿಷ್ಟನಾಗಿ ಕಾಣುತ್ತಾನೆ. ಒಬ್ಬ ಡಾಕ್ಟರ್ ಟಾರ್ಚ್ ಹಿಡಿದು ಅವನ ಬಾಯನ್ನು ಅಗಲಿಸಿ ನೋಡುತ್ತಾನೆ. ಸದ್ದಾಂ ಬಾಯಿ ತೆಗೆಯುತ್ತಾನೆ, ಮುಚ್ಚುತ್ತಾನೆ. ನಿಮಿಷ ನಿಮಿಷಕ್ಕೂ ಅದನ್ನೇ ತೋರಿಸುತ್ತಿದ್ದಾರೆ! ವಲ್ಗಾರಿಟಿ ಎನ್ನುವುದು ಜಗತ್ತಿನಲ್ಲಿ ಇದ್ದರೆ ಅದಿರುವುದು ಪಾಶ್ಚಾತ್ಯ ದೇಶದಲ್ಲಿ.

ನಮ್ಮ ದೇಶದಲ್ಲಿ ಇಲ್ಲ ಎಂದಲ್ಲ. ಕೂಡಲೆ ನನಗೆ ನೆನಪಾಗುವುದು- ಭಾಸ ದುರ್ಯೋಧನನನ್ನು ಹೀರೋ ಆಗಿ ನೋಡುತ್ತಾನೆ. ರಾಮಯಣದಲ್ಲೂ ಸಹಾ ಕವಿಗಳು ರಾವಣನನ್ನು ಜ್ವಾಜ್ವಲ್ಯಮಾನವಾದ ಅನೇಕ ಸಾಧ್ಯತೆಗಳ ವ್ಯಕ್ತಿಯನ್ನಾಗಿ ನೋಡುತ್ತಾರೆ. ಕುವೆಂಪು ರಾಮಾಯಣದಲ್ಲಿ ರಾವಣ ಕೊನೆಗೆ ಶಿಶುವಾಗಿ ಸಿತೆಯನ್ನು ತಾಯಿಯಾಗಿ ಪಡೆಯುತ್ತಾನೆ. ಇದು ನಮ್ಮ ಪರಂಪರೆ; ನೀನು ಯಾರ ವಿರುದ್ಧ ಯುದ್ಧ ಮಾಡಬೇಕೋ ಆ ಪ್ರತಿಸ್ಪರ್ಧಿಯ ವಿರುದ್ಧ ಗೌರವದಿಂದ ಯುದ್ಧ ಮಾಡಬೇಕು ಎನ್ನುವುದು ಇಲ್ಲಿಯ ನೀತಿ. ಈ ನೀತಿಯನ್ನು ಭೀಮ ಮೀರಿದನೆಂಬುದು ಒಂದು ಕಳಂಕವೇ ನಮಗೆ.

ಇವತ್ತು ಯಾರನ್ನು ಕೇಳಿದರೂ ಸದ್ದಾಂ ಬಹಳ ಕ್ರೂರಿ ಎನ್ನುತ್ತಾರೆ. ಕ್ರೂರಿ ಹೌದು. ತನ್ನ ಕಲ್ಪನೆಯ ಬಲಿಷ್ಠ ರಾಷ್ಟ್ರ ಕಟ್ಟುವುದಕ್ಕೆ ಹಿಂಸೆ ಉಪಾಯ ಎಂದು ಸದ್ದಾಂ ಎಲ್ಲರಂತೆ (ಲೆನಿನ್‌ರಂತೆ, ಮಾವೋರಂತೆ, ನೆಪೋಲಿಯನ್‌ನಂತೆ) ಭಾವಿಸಿದ್ದ. ಪಶ್ಚಿಮರಾಷ್ಟ್ರಗಳು ಅರಬರ ನಾಡನ್ನು ಹರಿದು ಹಂಚಿ ಇದು ಕುರ್ಡ್‌ರಿಗೆ, ಇದು ಶಿಯಾರಿಗೆ, ಇದು ಸುನ್ನಿಗಳಿಗೆ ಎಂದು ಅಪ್ಪಣೆ ಮಾಡಿ, ಪ್ಯಾಲೆಸ್ಟೇನರಿಂದ ಅವರು ಬದುಕುತ್ತಿದ್ದ ನಾಡನ್ನು ಕಸಿದು ಇಸ್ರೇಲ್ ಮಾಡಿ ಈ ಜನ ಸಮುದಾಯ ಎಂದೂ ಒಟ್ಟಾಗದಂತೆ ಮಾಡಿದರು. (ನಮಗೂ ಬ್ರಿಟೀಷರು ಹಾಗೇ ಮಾಡಿದರು) ಸದ್ದಾಂ ಈ ಎಲ್ಲರನ್ನೂ ಒಟ್ಟಾಗಿಟ್ಟುಕೊಳ್ಳಲು, ಹಲವರನ್ನು ಕೊಂದ, ಕೆಲವರನ್ನು ಬಡಿದ ಅಥವಾ ಎತ್ತಿದ, ಒಟ್ಟಿನಲ್ಲಿ ಹಿಂಸೆಯನ್ನು ಬಳಸಿದ. ಜನರಲ್ಲಿ ಸಾಕಷ್ಟು ಭಯೋತ್ಪಾದನೆ ಮಾಡಿದರೆ ಅವರು ವಿಧೇಯರಾಗಿರುತ್ತಾರೆ ಎಂಬುದು ಅವನ ನಂಬಿಕೆ. ನಮ್ಮಲ್ಲಿ ಕೆಲವರು ಈ ಹೊತ್ತು ಅದನ್ನೇ ಹೇಳುತ್ತಿದ್ದಾರೆ – ಮುಸ್ಲಿಮರಿಗೆ ಮತ್ತು ಕ್ರಿಶ್ಚಿಯನ್ನರಿಗೆ ಸಾಕಷ್ಟು ಭಯ ಹುಟ್ಟಿಸಿದರೆ ಅವರು ನಮ್ಮ ದೇಶಕ್ಕೆ ವಿಧೇಯರಾಗಿರುತ್ತಾರೆ ಎಂದು.

ಉಳಿದವರಿಗೆ ನೀತಿ ಹೇಳಲು ಪಾಶ್ಚಾತ್ಯ ದೇಶಗಳಿಗೆ ಯಾವ ಹಕ್ಕು ಇದೆ? ಯೂರೋಪಿನ ಜನರು ಅಮೇರಿಕಾಕ್ಕೆ ಹೋಗಿ ಅಲ್ಲಿನ ಬುಡಕಟ್ಟು ಜನರನ್ನು ಸಂಪೂರ್ಣ ನಾಶ ಮಾಡಿದರು. ಇವತ್ತು ಅಮೇರಿಕಾದ ಬುಡಕಟ್ಟು ಜನರು ಹೆಂಡ ಕುಡಿದು ಕೆಲವು ರಿಸರ್ವೇಶನ್ ಕ್ಯಾಂಪ್‌ಗಳಲ್ಲಿ ಪ್ರಯೋಜನಕ್ಕೆ ಬಾರದ ರೀತಿಯಲ್ಲಿದ್ದಾರೆ. ಆಸ್ಟ್ರೇಲಿಯಾದಲ್ಲಿರುವ ಬುಡಕಟ್ಟು ಜನರು ಸಂಪೂರ್ಣವಾಗಿ ನಾಶವಾಗಿದ್ದಾರೆ. ನಾವು ಅಧಿಕ ಸಂಖ್ಯೆಯಲ್ಲಿದ್ದ ಕಾರಣ ಬ್ರಿಟೀಷರು ನಮ್ಮನ್ನು ಸಂಪೂರ್ಣ ನಾಶ ಮಾಡಲು ಸಾಧ್ಯವಾಗಲಿಲ್ಲವೇನೋ! ಇಲ್ಲದಿದ್ದರೆ ಅಮೇರಿಕನ್ನರೋ ಇನ್ನಾರೋ ಈ ದೇಶವನ್ನು ಆಳಿಬಿಡುತ್ತಿದ್ದರು.

ಇಡೀ ಜಗತ್ತನ್ನು ಒಂದು ಮುಷ್ಟಿಯಲ್ಲಿಟ್ಟುಕೊಳ್ಳಬೇಕೆಂಬ ಐರೋಪ್ಯ ಜನಾಂಗದ ಆಸೆ ಇಂದು ಸಫಲವಾಗುತ್ತ ಇರುವಂತೆ ಕಾಣುತ್ತಿದೆ, ನಮ್ಮ ಸಹಕಾರದಿಂದಲೇ. ಹೇಗೆಂದರೆ ನಮ್ಮ ಬಹಳ ಸುಂದರವಾದ ಹುಡುಗಿಯರು ಅಮೇರಿಕಾದವರು ಮಾತನಾಡುವ ರೀತಿಯನ್ನು ಕಲಿತು ರಾತ್ರಿಯಲ್ಲಿ ಯಾವುದೋ ಒಂದು ಶಿಬಿರದಲ್ಲಿ ಯಾವನೋ ಎಲ್ಲಿಂದಲೋ ಫೋನ್ ಮಾಡಿದರೆ ಅಮೇರಿಕಾದ ವಾಯ್ಸ್‌ನಲ್ಲೇ ಉತ್ತರ ಕೊಡುತ್ತಾರೆ. ಅದನ್ನೇ ನಾವು ಭಾಗ್ಯ ಎಂದು ತಿಳಿದುಕೊಂಡಿದ್ದೇವೆ. ಈಗ ನಮ್ಮ ಕಾಲೇಜು ಶಿಕ್ಷಣ ಸಂಸ್ಥೆಗಳೂ ಇಂಥ 'ವಾಯ್ಸ್'ನ್ನು ಸೃಷ್ಟಿ ಮಾಡುವ ಕಡೆ ಇದೆ.

ಇದೂ ಒಂದು ರೀತಿಯ ಹಿಂಸೆಯೇ. ರಾಗಿ ಮುದ್ದೆ ಸೊಪ್ಪಿನ ಸಾರಿನಲ್ಲಿ ಸುಖ ಕಾಣುತ್ತಿದ್ದ ನಾಗರಕತೆಯನ್ನೇ ನಾಶ ಮಾಡಿದ ನಂತರ ಭಾರತದ ಜನರನ್ನು ಗೆಲ್ಲಬಹುದು ಎನ್ನುವದೂ ನಮ್ಮನ್ನು ಆಳುವ ಶ್ರೀಮಂತರಿಗೆ ಗೊತ್ತಿದೆ. ಕುಡಿಯಲು ನೀರಿಲ್ಲದಾಗ,

ಕೋಕಾಕೋಲಾ ಬಾಯಾರಿದವರ ವರವಾಗಿ ಕಾಣುತ್ತದೆ ಎಂದು ಅವರಿಗೆ ಗೊತ್ತಿದೆ.

ಇದು ಗಾಂಧೀಜಿಯವರಿಗೆ ಆಡಳಿತ ಹೇರುವ ಹಿಂಸೆ ಎಂದು ಗೊತ್ತಿತ್ತು. ಆದ್ದರಿಂದ ಈ ರೀತಿಯ ಹಿಂಸೆಯನ್ನು ಸಾಧ್ಯ ಮಾಡುವ ವಿಜ್ಞಾನಕ್ಕೆ, ಟೆಕ್ನಾಲಜಿಗೆ ಅವರು ವಿರೋಧಿಯಾದರು. ಆದರೆ ಗಾಂಧೀಜಿ ವಿಜ್ಞಾನ ವಿರೋಧಿಯಲ್ಲ. ಯಾಕೆಂದರೆ ಚರಕವೂ ಒಂದು ಯಂತ್ರ ಎಂದು ಅವರು ತಿಳಿದಿದ್ದರು.

ಇದು ಕಥೆಯಲ್ಲ ಎಲ್ಲೋ ಓದಿದ್ದು. ಸಿಂಗರ್ ಎನ್ನುವವನು ಒಂದು ಹೊಲಿಗೆ ಯಂತ್ರವನ್ನು ಕಂಡು ಹಿಡಿದ. ಯಾಕೆಂದರೆ ಅವನ ಹೆಂಡತಿಗೆ ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲ. ಅವಳು ಸೂಜಿಗೆ ದಾರ ಪೋಣಿಸಲು ಪಡುತ್ತಿದ್ದ ಕಷ್ಟವನ್ನು ಕಂಡು ಒಂದು ಹೊಲಿಗೆ ಯಂತ್ರವನ್ನು ಕಂಡುಹಿಡಿಯಬೇಕು ಎನ್ನಿಸಿತು. ಇದನ್ನು ಗಾಂಧಿ ಓದಿದ ಕೂಡಲೆ 'ಎಲ್ಲರ ಮನೆಯಲ್ಲಿ ಒಂದು ಹೊಲಿಗೆ ಯಂತ್ರ ಇರಬೇಕು'. ಎಂದರಂತೆ. ನಾನು ಒಂದೊಂದು ಸಾರಿ ತಮಾಷೆಯಾಗಿ ಹೇಳುತ್ತೇನೆ : 'ಕಂಪ್ಯೂಟರ್ ಸೌಲಭ್ಯವನ್ನು ನೋಡಿದ್ದರೆ ಗಾಂಧಿ ಪ್ರತಿಯೊಂದು ಮನೆಯಲ್ಲೂ ಕಂಪ್ಯೂಟರ್ ಇರಬೇಕು ಎಂದು ಹೇಳುತ್ತಿದ್ದರೇನೋ' ಎಂದು. ಗಾಂಧಿಯವರು ಯಂತ್ರಕ್ಕೆ ವಿರೋಧಿಯಲ್ಲ. ಆದರೆ ಯಂತ್ರದಿಂದ ಹುಟ್ಟುವ ಹಿಂಸೆ, ಮತ್ತು ಅಧಿಕಾರದ ಹೇರಿಕೆಗೆ ವಿರೋಧಿಯಾಗಿದ್ದರು. ಅದಕ್ಕಾಗಿಯೇ ಪ್ರತಿಯೊಬ್ಬರೂ ಕಾಯಕವನ್ನು ಮಾಡಬೇಕು ಎಂದು, ಟಾಲ್‌ಸ್ಟಾಯ್‌ರಂತೆಯೇ ಹೇಳುತ್ತಿದ್ದರು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಶರೀರಶ್ರಮ, ಅಸ್ವಾದ, ಸರ್ವತ್ರ ಭಯವರ್ಜನ, ಸರ್ವಧರ್ಮ ಸಮಭಾವ, ಸ್ವದೇಶಿ, ಸ್ಪರ್ಶ ಭಾವನಾ ಇವನ್ನು ಅವರು ಮಂತ್ರ ಮಾಡಿಕೊಂಡಿದ್ದರು.

ಗಾಂಧಿ ಹೇಳುವ ಅಸ್ವಾದದ ಬಗ್ಗೆ ಒಂದು ಮಾತು: ರುಚಿಗಳನ್ನು ಬೆಳಸಿಕೊಂಡ ಕಾರಣದಿಂದಲೇ ಈ ದಿನ ಕಾಡೆಲ್ಲಾ ಟೀ ಗಾರ್ಡನ್ ಮತ್ತು ಕಾಫಿ ತೋಟ ಆಗಿವೆ. ಆದರೆ ನಮ್ಮ ನಾಗರಿಕತೆ ಇರುವುದು ರುಚಿಗಳನ್ನು ಸೂಕ್ಷ್ಮಗೊಳಿಸುವ ವಿಧಾನದಲ್ಲಿ. ನಮ್ಮ ಎಲ್ಲಾ ಮಾರಾಟಗಳೂ ಸಾಧ್ಯವಾಗುವುದೂ ರುಚಿಗಳನ್ನು ಬೆಳಸಿಕೊಳ್ಳುತ್ತಾ ಹೋಗುವುದರಲ್ಲಿ. ಇದರಲ್ಲಿ ನಾವೆಲ್ಲರೂ ಪಾಲುದಾರರೇ. ಇಷ್ಟಪಡುವ ಪಾಲುದಾರರೇ. ಇದನ್ನು ತಾತ್ವಿಕವಾಗಿ ವಿರೋಧಿಸಿದರೂ ನಿಜದಲ್ಲಿ ಅದನ್ನೆ ಇಷ್ಟಪಡುತ್ತೇವೆ ಎಂಬ ವಿಷಾದವಾದರೂ ನಮ್ಮಲ್ಲಿ ಕಾಣಿಸಿಕೊಂಡರೆ ನಾವು ಕೊನೆಯ ಪಕ್ಷ ಮನುಷ್ಯ ಮಾತ್ರದವರು.

ಗಾಂಧಿ ಮತ್ತು ಟಾಲ್‌ಸ್ಟಾಯ್ ಈ ಆಸೆಯಲ್ಲೇ ಹಿಂಸೆಯ ಉಗಮ ಕಂಡರು. ಇಂಥಾ ಹಿಂಸೆಯನ್ನು ಕಂಡ ಗಾಂಧೀ ವಿಜ್ಞಾನಕ್ಕೆ ವಿರೋಧಿಯಂತೆ ಕಂಡರೂ ಅದರ ಹಿಂಸೆಗೆ ವಿರೋಧಿವಾಗಿದ್ದರೇ ಹೊರತು, ಜೀವಪರವಾದ ವಿಜ್ಞಾನ ತಂತ್ರಜ್ಞಾನಕ್ಕೆ ವಿರೋಧವಾಗಿರಲಿಲ್ಲ. ಈಗ ಬೇಕಾಗಿರುವುದು ಪರ್ಯಾಯ ತಂತ್ರಜ್ಞಾನ; ಮಧ್ಯಮ ಮಾರ್ಗೀಯ ತಂತ್ರಜ್ಞಾನ. ಬಹಷಃ ಗಾಂಧಿಯ ಪ್ರೇರಣೆಯಿಂದ ಜೀವಪರ ವಿಜ್ಞಾನವೂ ಪರ್ಯಾಯ ತಂತ್ರಜ್ಞಾನವೂ ಹುಟ್ಟಬಹುದು. ಆ ದಿಸೆಯಲ್ಲಿ ಈ ಪುಸ್ತಕ ಗಾಂಧಿಯ ನೈತಿಕ ಭಾಷೆಯಲ್ಲಿ ಇಲ್ಲದ, ಶಾಸ್ತ್ರೀಯವಾಗಿ ಗಾಂಧಿಯ ಬಗ್ಗೆ ಬರೆದಿರುವ ಬಹಳ ಗಹನವಾದ ಪುಸ್ತಕ.

* * *

ಜನಪದ ವ್ಯಕ್ತಿ

ಖಾದಿಗೆ ಪರ್ಯಾಯ ಹೆಸರು : ವೆಂಕಟರಮಣ ಅಯ್ಯರ್

ಹೊಸ ಪೀಳಿಗೆಯಲ್ಲಿ ಯಾರಿಗಾದರೂ ಖಾದಿ ಉದ್ಯಮ, ಖಾದಿ ಇತಿಹಾಸ, ಖಾದಿ ಭವಿಷ್ಯ ಇತ್ಯಾದಿ ವಿಷಯಗಳ ಬಗ್ಗೆ ತಿಳಿಯಬೇಕಿದ್ದರೆ ಅವರು ವೆಂಕಟರಮಣ ಅಯ್ಯರ್ ಅವರನ್ನು ಭೇಟಿಮಾಡಬೇಕು; ಅವರೊಂದಿಗೆ ಒಂದೆರಡು ಗಂಟೆ ಕಾಲ ಕಳೆಯಬೇಕು. ಅವರು ನಮ್ಮನ್ನು ೧೯೧೧ನೇ ಇಸವಿಗೆ ಕರೆದುಕೊಂಡು ಹೋಗುವರು. ಭಾರತದ ಸ್ವಾತಂತ್ರ್ಯ ಚಳುವಳಿಯೊಂದಿಗೆ ಖಾದಿ ಆಂದೋಲನ ಸೇರಿಕೊಂಡ ರೋಚಕ ಕಥೆಯನ್ನು ಹೇಳುವರು. ತಾವು ಹದಿನೈದು ವರ್ಷದ ಬಾಲಕನಾಗಿದ್ದಾಗ ತೆಗೆದುಕೊಂಡ ಖಾದಿವ್ರತ ಈಗ ತೊಂಭತ್ತೇಳನೆ ಇಳಿ ವಯಸ್ಸಿನಲ್ಲಿಯೂ ಹೇಗೆ ಪರಿಶುದ್ಧವಾಗಿ ಉಳಿದಿದೆ ಮತ್ತು ತಮ್ಮ ಕೊನೆ ಉಸಿರಿನವರೆಗೂ ಅದು ಹೇಗೆ ಆಚರಣೆಯಲ್ಲಿದೆ ಎಂಬುದನ್ನು ತುಂಬಾ ಉತ್ಸಾಹದಿಂದ ತಿಳಿಸುತ್ತಾರೆ. ಖಾದಿ ವಿಷಯದ ಬಗ್ಗೆ ಮಾತನಾಡಲು ಅವರಿಗೆ ದಣಿವೇ ಇಲ್ಲ. ವಿಷಾದದ ಸಂಗತಿ ಎಂದರೆ ಇಂದಿನ ಯುವಕರು ಅಯ್ಯರ್ ಅವರ ಖಾದಿ ಜೀವನದ ಅಪಾರ ಅನುಭವವನ್ನು ಕೇಳಿ ತಿಳಿದುಕೊಳ್ಳಲು ಮುಂದೆ ಬರದೇ ಇರುವುದು. ಅವರು ಎಲೆ ಮರೆಯ ಕಾಯಿಯಂತೆ ಇದ್ದಾರೆ. ಅದು ಅವರ ಸ್ವಭಾವ. ಎಂದೂ ತಮ್ಮ ಸಾಧನೆಯನ್ನು, ತ್ಯಾಗವನ್ನು ರಂಜಿಸಿ ಯಾರೊಂದಿಗೂ ಹೇಳಿಕೊಳ್ಳುವವರಲ್ಲ. ಖಾದಿ ಕ್ಷೇತ್ರದಲ್ಲಿ ಅವರ ಸೇವೆ ಒಂದೆರಡು ವರ್ಷಗಳದ್ದಲ್ಲ. ತೊಂಭತ್ತೇಳು ವರ್ಷಗಳಷ್ಟು ದೀರ್ಘವಾದದ್ದು. ಇನ್ನೂ ಅವರ ಉತ್ಸಾಹ ಕುಂದಿಲ್ಲ. ಸಾರ್ವಜನಿಕ ಜೀವನದಲ್ಲಿ ಇಷ್ಟು ಸುದೀರ್ಘಕಾಲ ಕೆಲಸಮಾಡಿ ಇನ್ನೂ ಹರ್ಷಿತರಾಗಿ ಇರುವಂಥ ವ್ಯಕ್ತಿಗಳು ಸಿಗುವುದು ದುರ್ಲಭ. ಕರ್ನಾಟಕದಲ್ಲಿ ಖಾದಿ ಕೆಲಸವನ್ನು ಸಜೀವವಾಗಿ ಇಟ್ಟಿರುವ ಕೆಲವೇ ಹಿರಿಯರಲ್ಲಿ ಶ್ರೀ ಹೆಚ್.ಆರ್. ವೆಂಕಟರಮಣ ಅಯ್ಯರ್ ಪ್ರಮುಖರು. ಖಾದಿ ಅಂದರೆ ವೆಂಕಟರಮಣ ಅಯ್ಯರ್, ಅಯ್ಯರ್ ಅಂದರೆ ಖಾದಿ ಎಂಬ ಅರ್ಥ ಬರುವಷ್ಟರ ಮಟ್ಟಿಗೆ ಅಯ್ಯರ್ ಮತ್ತು ಖಾದಿಯ ಸಂಬಂಧ ಇದೆ. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಕಳೆದ ಐವತ್ತು ವರ್ಷಗಳಿಂದ ಖಾದಿ ಕೆಲಸ ಮಾಡುತ್ತಿರುವ ಕರ್ನಾಟಕ ಸರ್ವೋದಯ ಸಂಘ ಯಾರಿಗೆ ತಾನೆ ಗೊತ್ತಿಲ್ಲ?
ಈ ಸಂಸ್ಥೆಯ ರುವಾರಿ ವೆಂಕಟರಮಣ ಅಯ್ಯರ್. ಇಪ್ಪತ್ತೆರಡು ವರ್ಷಗಳ ಕಾಲ ಸಂಘದ ಕಾರ್ಯದರ್ಶಿಯಾಗಿಯೂ, ಹದಿನಾಲ್ಕು ವರ್ಷಗಳ ಕಾಲ ಅಧ್ಯಕ್ಷರಾಗಿಯೂ ಕೆಲಸಮಾಡಿದ್ದಾರೆ. ಇಂದು ಕರ್ನಾಟಕ ಸರ್ವೋದಯ ಸಂಘ ತನ್ನ ಸ್ವಂತ ಕಟ್ಟಡ ಹೊಂದಿರುವುದರ ಜೊತೆಗೆ ಸುಮಾರು ಏಳುನೂರು ಜನರಿಗೆ ಖಾದಿ-ಗ್ರಾಮೋದ್ಯೋಗ ಕ್ಷೇತ್ರದಲ್ಲಿ ಉದ್ಯೋಗ ದೊರೆಯುವಂತೆ ಮಾಡಿ ೨೩೨.೭೭ ಲಕ್ಷ ರುಪಾಯಿಗಳಷ್ಟು

ಖಾದಿ ಮಾರಾಟವಾಗುವುದಕ್ಕೆ ಕಾರಣವಾಗಿದ್ದಾರೆ. ಈಗ ಅಯ್ಯರ್‌ರವರು ಸಂಘದ ಆಡಳಿತ ಮಂಡಳಿಯ ಸದಸ್ಯರಾಗಿ ಸಂಘದ ಚಟುವಟಿಕೆಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಸಭೆಯಲ್ಲಿ ಚರ್ಚೆಗೆ ಬರುವ ಪ್ರತಿಯೊಂದು ವಿಷಯದ ಆಗು ಹೋಗುಗಳ ಬಗ್ಗೆ ಚಿಂತನೆ ಮಾಡಿ ತಮ್ಮ ಅಭಿಪ್ರಾಯ ಮಂಡಿಸುತ್ತಾರೆ. ಯಾವ ಒಂದು ವಿಷಯವೂ ಉಪೇಕ್ಷಿತವಾಗದಂತೆ ಎಚ್ಚರ ವಹಿಸುತ್ತಾರೆ.

೧೯೧೧ ರಲ್ಲಿ ಜನಿಸಿದ ಅಯ್ಯರ್‌ರವರು ಬೆಂಗಳೂರಿನ ದೇಶಿ ವಿದ್ಯಾಸಂಸ್ಥೆಯಲ್ಲಿ ಶಿಕ್ಷಣ ಪಡೆದರು. ಅವರು ಶಾಲೆಯಲ್ಲಿ ಓದುತ್ತಿದ್ದಾಗಲೇ ರಾಷ್ಟ್ರನಾಯಕರ ಭಾಷಣಗಳನ್ನು ಕೇಳಿ ಪ್ರಭಾವಿತರಾದರು. ೧೯೨೬ ರಲ್ಲಿ ಡಾ. ರಾಜೇಂದ್ರ ಪ್ರಸಾದರು ಬೆಂಗಳೂರಿಗೆ ಬಂದಿದ್ದರು. ಕಲಾಸಿಪಾಳ್ಯದಲ್ಲಿದ್ದ ರತ್ನಾವಳಿ ಥೇಯಿಟರ್‌ನಲ್ಲಿ ಅವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅವರು ತಮ್ಮ ಭಾಷಣದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಖಾದಿಯ ಪಾತ್ರವನ್ನು ಕುರಿತು ತುಂಬಾ ಪರಿಣಾಮಕಾರಿಯಾಗಿ ತಿಳಿಸಿದರು. ಅವರ ಭಾಷಣವನ್ನು ಕೇಳಿದ ಅನೇಕರು ತಮ್ಮ ವಿದೇಶಿ ಉಡುಪನ್ನು ತ್ಯಜಿಸಿ ಖಾದಿ ಧರಿಸಲು ಪ್ರಾರಂಭಿಸಿದರು. ಆ ಸಭೆಯಲ್ಲಿದ್ದ ಅಯ್ಯರ್ ಸಹ ಅಂದಿನಿಂದ ಖಾದಿ ಧರಿಸಲು ಮತ್ತು ಖಾದಿಗಾಗಿ ದುಡಿಯಲು ಸಂಕಲ್ಪಿಸಿದರು. ಆಗ ಅವರ ವಯಸ್ಸು ಹದಿನೈದು. ಅಂದಿನಿಂದ ಇಂದಿನವರೆಗೂ ಆ ವ್ರತಕ್ಕೆ ಸ್ವಲ್ಪವೂ ಧಕ್ಕೆ ಬರದಂತೆ ಆಚರಿಸಿಕೊಂಡು ಬಂದಿದ್ದಾರೆ.

ಕರ್ನಾಟಕ ಸರ್ವೋದಯ ಸಂಘವು ಇಷ್ಟರಲ್ಲಿಯೇ ಮೈಸೂರಿನಲ್ಲಿ ಖಾದಿ ಭಂಡಾರವನ್ನು ಪ್ರಾರಂಭಿಸಲಿದೆ ಮತ್ತು ಈ ವರ್ಷ ಡಿಸೆಂಬರ್‌ನಲ್ಲಿ ತನ್ನ ಸ್ವರ್ಣಜಯಂತಿಯನ್ನು ಆಚರಿಸಲಿದೆ. ಅಯ್ಯರ್‌ರವರು ಖಾದಿ ಕೆಲಸದ ನಿಮಿತ್ತ ಚಿಕ್ಕಮಗಳೂರು, ಬೆಳಗಾವಿ, ಬೆಂಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಹಲವಾರು ವರ್ಷಗಳನ್ನ್ನು ಕಳೆದಿದ್ದಾರೆ. ಜಾಗತೀಕರಣದ ಸಂದರ್ಭದಲ್ಲಿ ಖಾದಿ ಭವಿಷ್ಯ ಪ್ರಶ್ನಾರ್ಹವಾಗಿರುವ ಸಂದರ್ಭದಲ್ಲಿ ಅಯ್ಯರ್‌ರವರ ಪ್ರೀತಿಯ ಕರ್ನಾಟಕ ಸರ್ವೋದಯ ಸಂಘ ತುಂಬ ಆತ್ಮವಿಶ್ವಾಸದಿಂದ ಬದನವಾಳು, ಚಿಕ್ಕಜಾಜೂರು, ಮಲ್ಲಾಡಿಹಳ್ಳಿ ಮುಂತಾದ ಸ್ಥಳಗಳಲ್ಲಿ ನೂಲುಗಾರಿಕೆಗೆ ಎಂಟು ಕದಿರಿನ ಅಂಬರ ಚರಕಾಗಳನ್ನು ಕೊಟ್ಟು ಅವರು ತಮ್ಮ ದಿನದ ಆದಾಯವನ್ನು ಹೆಚ್ಚಿಸಿಕೊಳ್ಳುವಂತೆ ಮಾಡುತ್ತಿದೆ. ಅಯ್ಯರ್‌ರವರು ಗಣ ನಾಯಕತ್ವವನ್ನು ಪ್ರೋತ್ಸಾಹಿಸುವ ಮನೋಧರ್ಮದವರಾಗಿರುವುದರಿಂದ ಕರ್ನಾಟಕ ಸರ್ವೋದಯ ಸಂಘ ಈಗ ಉತ್ಸಾಹಿ ಮತ್ತು ಪ್ರಾಮಾಣಿಕ ಸದಸ್ಯರನ್ನೊಳಗೊಂಡು ಅಯ್ಯರ್‌ರವರ ಖಾದಿ ಪ್ರೇಮ ಮತ್ತು ಅಭಿಮಾನಕ್ಕೆ ಚ್ಯುತಿ ಬರದಂತೆ ಕೆಲಸ ಮಾಡುತ್ತಿದ್ದಾರೆ. ಗಾಂಧೀಜಿಯವರು ಖಾದಿ ಕಾರ್ಯಕರ್ತನ ಬಗ್ಗೆ ಕೊಟ್ಟಿರುವ ವ್ಯಾಖ್ಯೆಯಂತೆ ಜೀವನ ಸವೆಸಿರುವ ವೆಂಕಟರಮಣ ಅಯ್ಯರ್ ಕರ್ನಾಟಕ ಖಾದಿ ಇತಿಹಾಸದಲ್ಲಿ ಮಹತ್ವದ ಹೆಸರು.

– **ಸುಕೌ**

ಸತ್ಯಕ್ಕಾಗಿ ಟಾಗೋರರ ತಂತ್ರ

– ಗುರುದಯಾಳ್ ಮಲ್ಲಿಕ್

ಅಂದು ಆಗಸ್ಟ್ ಏಳನೇ ತಾರೀಖು ರಾತ್ರಿ ಹನ್ನೊಂದರ ಸಮಯ. ಶಾಂತಿನಿಕೇತನ ಕಛೇರಿಯ ದೂರವಾಣಿಯ ಕರೆ ರಿಂಗಣಿಸಿತು. ಕಲ್ಕತ್ತಾದಿಂದ ಯಾರೋ ಗದ್ಗದಿಸುತ್ತಾ "ಗುರುದೇವರು ತೀರಿಕೊಂಡರು" ಎಂದು ಹೇಳಿದರು. ನಾವೆಲ್ಲರೂ ಸ್ತಂಭೀಭೂತರಾದೆವು. ಕೆಲವು ದಿನಗಳ ಹಿಂದೆಯಷ್ಟೆ ಅವರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಗುರು ಟಾಗೋರರ ಆರೋಗ್ಯದ ಬಗ್ಗೆ ಎರಡು ದಿನಗಳ ಹಿಂದೆ ಹೊರಬಿದ್ದಿದ್ದ ವೈದ್ಯರ ಪ್ರಕಟಣೆ ಅವರು ಸಂಪೂರ್ಣವಾಗಿ ಗುಣಹೊಂದಬಹುದೆಂಬ ಹೊಳಹನ್ನೇನೂ ಕೊಟ್ಟಿರಲಿಲ್ಲ. ಸಾವೆಂಬುದು ಶತಃಸಿದ್ಧ ಎಂದು ದೈನಂದಿನ ಸಾಕ್ಷಿಯಿದ್ದರೂ ಟಾಗೋರರಂಥ ವ್ಯಕ್ತಿ ಎಂದೂ ಮರಣಹೊಂದಲಾರರೆಂಬ ನಮ್ಮ ಅನಿಸಿಕೆ ಆ ಭಾವನಗೆ ಕಾರಣವಾಗಿದ್ದಿರಬಹುದು. ಆ ದಿನ ಸಾಯಂಕಾಲದಿಂದಲೇ ಬೀಳುತ್ತಿದ್ದ ಮಳೆಯ ರಭಸ ಹೆಚ್ಚಾಗಿ ಶಾಂತಿನಿಕೇತನ ನಿವಾಸಿಗಳ ದುಃಖದ ಭಾರವನ್ನು ಕಡಿಮೆ ಮಾಡಲೋ ಎಂಬಂತೆ ಪ್ರಕೃತಿಯು ಸಹ ಧಾರಾಕಾರವಾಗಿ ಕಣ್ಣೀರನ್ನು ಸುರಿಸಿತು. ಸಂಜೆಯಾಯಿತು ; ಅದನ್ನನುಸರಿಸಿ ರಾತ್ರಿ ಬಂತು. ಆಗಸ ತುಂಬ ನಕ್ಷತ್ರ ಮಿನುಗುತ್ತಿದ್ದವು. ಒಂದು ಗಳಿಗೆ ನಮಗೆ ಪ್ರತಿಯೊಂದು ಪ್ರಕಾರದ ಮಾನವನ ನೋವೂ ತನ್ನ ಮೊನಚನ್ನು ಕಳೆದುಕೊಳ್ಳುವಂಥ ಅನಂತತೆಯ ಶಾಂತಿ ಅನುಭವವಾಗುತ್ತಿರುವಂತೆ ಅನಿಸಿತು. ಆದ್ದರಿಂದ ಶಾಂತಿನಿಕೇತನದ ಕವಿಋಷಿಯ ಆತ್ಮದೊಂದಿಗೆ ಅನುಸಂಧಾನ ಮಾಡಲು ಇದೇ ತಕ್ಕ ಸಮಯವೆಂದು ನಮಗನಿಸಿತು. ನಾನು ಏಕಾಗ್ರಚಿತ್ತದಿಂದ ಒಬ್ಬನೇ ಆ ಅಗೋಚರ ಶಾಂತಿ ಮಂದಿರದಲ್ಲಿ ಕುಳಿತೆ. ಟಾಗೋರರು ತಮ್ಮ ಬೃಹತ್ ಪ್ರಮಾಣದ ಸಾಹಿತ್ಯ ರಚನೆಯಲ್ಲಿ ಉಪಯೋಗಿಸಿದ್ದ ಪ್ರತಿಮಾ ರೂಪಕಗಳು ಒಂದಾದ ನಂತರ ಒಂದು ನನ್ನ ಕಣ್ಣ ಮುಂದೆ ಏಕಪ್ರಕಾರವಾಗಿ ಹಾದು ಹೋದವು. ಅವುಗಳಲ್ಲಿ ಕೆಲವನ್ನು ಹಿಡಿದಿಡಲು ಬಹು ಪ್ರಯಾಸಪಟ್ಟೆ, ನಕ್ಷತ್ರಗಳ ಬೆಳಕಿನಲ್ಲಿ ಅವುಗಳನ್ನು ಕುರಿತು ಚಿಂತನೆ ಮಾಡಲು ಬಯಸಿದ್ದೆ. ಏಕೆಂದರೆ ಅಂಥ ಪ್ರಶಾಂತವಾದ ಬೆಳಕಿನಲ್ಲಿ ಮಾತ್ರ ಆತ್ಮಕ್ಕೆ ಸಂಬಂಧಿಸಿದ ಸತ್ಯಗಳನ್ನು ಸರಿಯಾಗಿ ಹಾಗೂ ಪೂರ್ಣವಾಗಿ ಅಭ್ಯಸಿಸಲು ಸಾಧ್ಯ.

ಗೂಡು–ಆಕಾಶ; ಸ್ತಂಭ–ದೀಪ; ಪ್ರವಾಹ–ಸಾಗರ; ಬೀಜ–ವೃಕ್ಷ; ಮೊಗ್ಗು–ಹೂ–ಹಣ್ಣು; ಕಾರ್ಯವ್ಯಸ್ತ ದುಂಬಿ ಮತ್ತು ಚಿಟ್ಟೆ – ಇಂಥ ರೂಪಕಗಳು ಬಹಳ ಹೊತ್ತು ನನ್ನ ಧ್ಯಾನದ ಕೇಂದ್ರಬಿಂದುವಾಗಿದ್ದವು. ನಿಧಾನವಾಗಿ ಅವುಗಳ ಮಹತ್ವ ವಿಧವಿಧವಾಗಿ ಮನಸ್ಸಿನಾಳಕ್ಕೆ ಇಳಿದವು. ಬಹುಸಂಖ್ಯಾತ ಜನರು ಹೊಂದಿರುವ ಅಪೂರ್ಣ ದೃಷ್ಟಿಯ ಬದಲಿಗೆ ಪೂರ್ಣ ದೃಷ್ಟಿಯು ಒಟ್ಟು ಸಾರ ಆ ರೂಪಕಗಳಾಗಿದ್ದವು. ಜೀವನದ ಪರಿಪೂರ್ಣತೆಯ ಆದರ್ಶವನ್ನು ಅಂತ ಮತ್ತು ಅನಂತತೆ; ವ್ಯಕ್ತಿ ಮತ್ತು ವಿಶ್ವ; ಆತ್ಮ ಮತ್ತು ಪರಮಾತ್ಮ; ಮಾನವ ಮತ್ತು ಪ್ರಕೃತಿಗಳ ಮಧ್ಯ ಸಂಬಂಧವನ್ನು ಅಭ್ಯಾಸದ ಮೂಲಕ ಸಾಧಿಸಬಹುದೆಂದು ಟಾಗೋರ್ ಹೇಳಿದ್ದರು. ಏಕೆಂದರೆ ಅಂತ ಮತ್ತು ಅನಂತತೆಯ ಬೆನ್ನಟ್ಟುವಿಕೆಯೇ ಮಾನವನನ್ನು ಅಜ್ಞಾನದ ಕಗ್ಗತ್ತಲೆಯಲ್ಲಿ ತಂದು ನಿಲ್ಲಿಸುತ್ತದೆ. ಉದಾಹರಣೆಗೆ ಹಕ್ಕಿಯೊಂದು ಮುಕ್ತಿಯ ಸ್ವಾನುಭವವನ್ನು ಪಡೆಯಬೇಕಾದರೆ ಅದಕ್ಕೆ ಗೂಡೂ ಬೇಕು, ಆಗಸವೂ ಬೇಕು. ಗೂಡು ಆ ಹಕ್ಕಿಗೆ ಆಹಾರವನ್ನೂ, ವಿಶ್ರಾಂತಿಯನ್ನೂ ಒದಗಿಸುವುದರ

ಜೊತೆಗೆ ಅದಕ್ಕೆ ಭೌತಿಕ ಆಶ್ರಯ ಮತ್ತು ಭದ್ರತೆಯನ್ನೂ ಒದಗಿಸುತ್ತದೆ. ಆದರೆ ಅದನ್ನು ಒಂದು "ಪಂಜರ"ದ ಎಲ್ಲೆಯೊಳಗೆ ಬಂಧಿಸುತ್ತದೆ. ಆದ್ದರಿಂದ ಹಕ್ಕಿಗೆ ಅನಂತತೆಯ ವಿಸ್ತಾರದೊಂದಿಗೆ ಸಂಪರ್ಕ ಸಾಧಿಸುವುದರ ಮೂಲಕ ತನ್ನ ಅಂತರಂಗದ ಮತ್ತು ವಿಸ್ತೃತ ಆತ್ಮದ ಇರುವಿಕೆಯ ಸಂತೋಷ ಮತ್ತು ಅನುಭವವನ್ನು ಪಡೆಯಲು ಆಕಾಶವೂ ಬೇಕಾಗುತ್ತದೆ.

ಇನ್ನೊಂದು ರೂಪಕವನ್ನು ಗಮನಿಸೋಣ. ನದಿ ತನ್ನ ಎರಡೂ ಪಾರ್ಶ್ವದಲ್ಲಿರುವ ಹಳ್ಳಿಗರ ಸೇವೆ ಮಾಡುತ್ತದೆ. ಆದರೆ ಅದು ಮೇರೆಯಿಲ್ಲದ ಸಾಗರ ಸೇರಿದಾಗ ಮಾತ್ರ ತನ್ನ ಸಾರ್ಥಕ್ಯ ಪಡೆಯುತ್ತದೆ.

ಯಾವುದೇ ಒಂದು ದೀಪ ತನ್ನ ಬುಡ್ಡಿಯಲ್ಲಿ ಎಣ್ಣೆಯನ್ನು ಕೇವಲ ಸಂಗ್ರಹಿಸಿಟ್ಟುಕೊಂಡಿರುವವರೆಗೆ ಅದು 'ಅಂಧ'ವಾಗಿಯೂ, ನಿರಪಯುಕ್ತವಾಗಿಯೂ ಇರುತ್ತದೆ. ಆದರೆ ಆ ಎಣ್ಣೆಗೆ ಉರಿದು ಹೋಗಲು ಅವಕಾಶ ದೊರೆತಕೂಡಲೆ ದೀಪವು ಎಲ್ಲೆಡೆಗೂ ಬೆಳಕನ್ನು ಚೆಲ್ಲುತ್ತದೆ; ಅದರ ಕಿರಣಗಳು ಸುತ್ತಲಿರುವ ಎಲ್ಲ ಪದಾರ್ಥಗಳನ್ನು ಪ್ರಕಾಶಿಸುತ್ತದೆ. ಹೀಗೆ ಕಿರಿದಾಗಿ ತನ್ನ ಆತ್ಮವನ್ನು ಹಿರಿದಾದ ಆತ್ಮದಲ್ಲಿ ಲೀನವಾಗುವುದರ ಮೂಲಕ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತದೆ, ನದಿಯು ಸಾಗರದಲ್ಲಿ ಲೀನವಾಗುವುದರ ಮೂಲಕ ಸಾರ್ಥಕತೆಯನ್ನು ಪಡೆಯುವಂತೆ.

ಸದಾ ಕಾರ್ಯನಿರತವಾಗಿರುವ ಜೇನುಹುಳು ಜೇನು ತುಪ್ಪವನ್ನು ಸಂಗ್ರಹಿಸುವುದರಲ್ಲಿಯೇ ಸಂತೋಷ ಪಡುತ್ತಿರಬಹುದು. ಅದರೆ ಆ ಸಂತೋಷದಲ್ಲಿ ದಾತಾನನ್ನು ಮರೆತುಬಿಡುತ್ತದೆ. ಒಂದು ವೇಳೆ ಅದು ಚಿಟ್ಟೆಯ ಸೌಂದರ್ಯವನ್ನೇನಾದರೂ ಬೆಳೆಸಿಕೊಂಡರೆ ಅದರ ಜಿಪುಣತನವು ದಾತಾನ ಶ್ರೀಮಂತಿಕೆಯನ್ನು ಹೆಚ್ಚಿಸುವುದರಲ್ಲಿ ಪರಿವರ್ತಿತಗೊಳ್ಳುವುದು. ಏಕೆಂದರೆ ತನ್ನ ಮಿತ ಸೌಂದರ್ಯದ ಮೂಲಕ ಅಮಿತ ಸೌಂದರ್ಯದೊಂದಿಗೆ ತಾದ್ಯಾತ್ಮ ಸಾಧಿಸುವುದಕ್ಕೆ ಸಾಧ್ಯವಾಗುವುದು.

"ಜೀವನವು ಅಗಾಧವಾಗಿದೆ, ಪರಿಗ್ರಹದ ಆದರ್ಶದ ಬದಲಾಗಿ ಪರಿಪೂರ್ಣತೆಯನ್ನು ಪಡೆಯುವುದರಲ್ಲಿಯೇ ನಿಜವಾದ ಧರ್ಮ ಹಾಗು ಬದುಕಿನ ಕೆಚ್ಚು ಇದೆ" ಎಂದು ಉಪನಿಷತ್ ಋಷಿಗಳು ಹೇಳಿದ ಸತ್ಯವನ್ನೇ ಟಾಗೋರರು ಪುನಃ ಕಲಿಸಿದರೆಂದು ನನಗೆ ನಾನೇ ಹೇಳಿಕೊಂಡೆ.

ಅಷ್ಟರಲ್ಲಿ ಬೆಳಗಿನ ಹಕ್ಕಿ ಹೊಸದಿನದ ಆಗಮನವನ್ನು ಘೋಷಿಸುತ್ತಿತ್ತು.

ಟಾಗೋರರ ಚೇತನಕ್ಕೆ ಗೌರವಪೂರ್ಣ, ಪ್ರೇಮಪೂರ್ಣ ಭಾವನೆಯಿಂದ ಸ್ವಗತದಲ್ಲಿ ಹೀಗೆ ಅಂದುಕೊಂಡೆ, "ಎಂಥದೇ ಹೀನ ಸ್ವಾರ್ಥವಾಗಿರಲಿ ಅದನ್ನು ದಾಟಿ ಜೀವನದ ಎಲ್ಲ ಮೌಲ್ಯಗಳಲ್ಲಿ ಮತ್ತು ಕನಸುಗಳಲ್ಲಿ ವ್ಯಕ್ತವಾಗುವ ಅನಂತತೆ, ಅಗಾಧತೆ, ಅಪಾರತೆಯ ಜೀವನಕ್ಕಾಗಿ ನನ್ನನ್ನು ನಾನು ಅರ್ಪಿಸಿಕೊಳ್ಳಬೇಕು. ಏಕೆಂದರೆ ಈ ಮಾರ್ಗದಿಂದ ಮಾತ್ರ ದೇವರು ಮತ್ತು ಗುರುದೇವರು ಅಜರಾಮರವಾಗಿ ಕೀರ್ತಿಶೇಷರಾಗಿರುತ್ತಾರೆ. ಆದ್ದರಿಂದ ನನ್ನ ಜೀವನದ ಸಾಧನಾ ಮಾರ್ಗದಲ್ಲಿ ಅನೇಕ ತಪ್ಪು ಮತ್ತು ಜಾರಿಕೆಗಳ ಅನಂತರವೂ ನನಗೆ ಆಗಾಗ್ಗೆ ನನ್ನ ಅಂತಃಸಾಕ್ಷಿಯ ಆಳದಲ್ಲಿ ಹಳ್ಳಿಯ ಗಾಡಿ ಚಾಲಕನ ಮತ್ತು ಅಂಬಿಗನ ಹಾಡಿನ ರಾಗ ಕೇಳುತ್ತಲೇ ಇರುತ್ತದೆ.

"ನನ್ನನ್ನು ಆ ತೀರಕೆ ಕರೆದೊಯ್ಯು, ಆ ತೀರಕೆ ಕರೆದೊಯ್ಯು!"

* * *

ಜನಪದ ಧ್ವನಿ

ಸರ್ವಧರ್ಮ ಸಮನ್ವಯ ಇಂದಿನ ಅಗತ್ಯ

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ರ ರಾಷ್ಟ್ರಗಳಲ್ಲೊಂದಾದ ಭಾರತ ಹಲವು ಧರ್ಮ, ಜಾತಿ, ಮತ, ಪಂಥ, ಭಾಷೆಗಳನ್ನು ಹೊಂದಿದ್ದು 'ಅನೇಕತೆಯಲ್ಲಿ ಏಕತೆ'ಯನ್ನು ಪ್ರತಿನಿಧಿಸುತ್ತಿದೆ. ಇಂತಹ ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಧರ್ಮದ ಹೆಸರಿನಲ್ಲಿ ಕೋಮು ಸಾಮರಸ್ಯ ಗಣನೀಯವಾಗಿ ಹದಗೆಡುತ್ತಿದೆ. ಇದನ್ನು ತಹಬಂದಿಗೆ ತರುವ ನಿಟ್ಟಿನಲ್ಲಿ ಮಹಾತ್ಮ ಗಾಂಧೀಜಿಯವರ ಸರ್ವಧರ್ಮ ಸಮನ್ವಯದ ದೃಷ್ಟಿ, ಧ್ಯೇಯ ಧೋರಣೆಗಳನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ.

ಹಿಂದೂ ಧರ್ಮಕ್ಕೆ ಅಂಟಿಕೊಂಡು ಬೆಳೆದ ಗಾಂಧೀಜಿಯ ಹಿಂದೂಧರ್ಮ ಸಂಕುಚಿತವಾಗಿರಲಿಲ್ಲ. ಅದು ಮುಕ್ತ ಮನಸ್ಸನ್ನು ಹೊಂದಿತ್ತು. ಅನ್ಯಧರ್ಮಗಳ ಬಗ್ಗೆ ಗೌರವಾದರ, ಸರ್ವಧರ್ಮ ಸಮಭಾವ ಹೊಂದಿತ್ತು. ಅವರೇ ಹೇಳುವ ಹಾಗೆ, "ಹಿಂದೂ ಧರ್ಮವು ನನಗೆ ಗೊತ್ತಿರುವ ಧರ್ಮಗಳಲ್ಲೆಲ್ಲ ಅತ್ಯಂತ ಸಹಿಷ್ಣುತೆಯಿಂದ ಕೂಡಿದೆ. ಸಿದ್ಧಾಂತಗಳ ರಾದ್ಧಾಂತದಿಂದ ದೂರ ಸರಿಯುವ ಅದರ ಆತ್ಮ ಸ್ವಾತಂತ್ರ್ಯ ನನ್ನ ಮೇಲೆ ಮಹಾಪ್ರಭಾವ ಬೀರಿದೆ. ಯಾವ ಧರ್ಮಾನುಭವವನ್ನೂ ಪ್ರತ್ಯೇಕವೆಂದು ಭಾವಿಸಿದಿರುವ ಅದು ತನ್ನ ಅನುಯಾಯಿಗಳಿಗೆ ಎಲ್ಲ ಧರ್ಮಗಳನ್ನೂ ಗೌರವಿಸಲು ಅವಕಾಶ ಕಲ್ಪಿಸುತ್ತದೆ. ಇತರ ಧರ್ಮಗಳಲ್ಲಿರುವ ಒಳ್ಳೆಯ ಅಂಶಗಳನ್ನು ಮೆಚ್ಚಿ ಅವುಗಳನ್ನು ತನ್ನದನ್ನಾಗಿ ಮಾಡಿಕೊಳ್ಳಲು ಅವಕಾಶ ಕಲ್ಪಿಸುತ್ತದೆ. ಅಹಿಂಸೆ ಎಲ್ಲ ಧರ್ಮಗಳಿಗೆ ಸಾಮಾನ್ಯ ಅಂಶ."

ಧರ್ಮದ ಉದ್ದೇಶ ಉತ್ಕೃಷ್ಟವಾಗಿದ್ದರೂ ಅದರ ಅನುಷ್ಠಾನದ ಹಂತದಲ್ಲಿ, ಆಚರಣೆಯ ದೃಷ್ಟಿಯಿಂದ, ಪ್ರಚಾರದ ಮಜಲಿನಲ್ಲಿ ದಾರಿ ತಪ್ಪುತ್ತಿರುವುದನ್ನು ಕಾಣಬಹುದು. ಇಂತಹ ಸಂದರ್ಭಗಳಲ್ಲಿ ಎಲ್ಲ ಧರ್ಮೀಯರಲ್ಲಿ ಪರಸ್ಪರ ಅಪನಂಬಿಕೆ ಬೇರೂರುತ್ತಿದೆ. ಇಂತಹ ಸಂದರ್ಭಗಳನ್ನು ಕೆಲ ರಾಜಕೀಯ ವ್ಯಕ್ತಿಗಳು, ದುಷ್ಟಶಕ್ತಿಗಳು, ಭಯೋತ್ಪಾದಕರು, ಸಮಾಜ ಘಾತುಕ ಶಕ್ತಿಗಳು ತಮ್ಮ ಸ್ವಹಿತಾಸಕ್ತಿಗೆ ಬಳಸಿಕೊಳ್ಳುತ್ತಿರುವುದು ಸಮಸ್ಯೆ ಉಲ್ಬಣಕ್ಕೆ ಕಾರಣವಾಗುತ್ತಿವೆ. ಮತ್ತೆ ಮತ್ತೆ ಮರುಕಳಿಸಲು ಸಾಧ್ಯವಾಗುತ್ತಿದೆ.

ಉದಾತ್ತ ದೃಷ್ಟಿ ಹೊಂದಿದ್ದ ಗಾಂಧೀಜಿಯ ಸರ್ವಧರ್ಮ ಸಮನ್ವಯದ ಸಂದೇಶ ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ ಅಗತ್ಯವಾಗಿದೆ. ಇದನ್ನು ಪ್ರಚುರಪಡಿಸುವ, ಸಾಕಾರಗೊಳಿಸುವ, ಅನುಷ್ಠಾನಗೊಳಿಸುವ, ದರ್ಮ-ಧರ್ಮಗಳ ನಡುವೆ ಬಾಂಧವ್ಯ ಬೆಸೆಯುವ ಕೆಲಸ ಅಗತ್ಯವಾಗಿದೆ. ಆದರೆ 'ಬೆಕ್ಕಿಗೆ ಗಂಟೆಕಟ್ಟುವವರಾರು?' ಎಂಬುದೇ ಪ್ರಶ್ನೆ.

– ಹೊಳಲು ಶ್ರೀಧರ್, ಮಂಡ್ಯ

* * *

ಯಾವುದೇ ಗೌರವ ಬಯಸದ ಸ್ವಾತಂತ್ರ್ಯ ಯೋಧರು

– *ಸತ್ಯವ್ರತ*

ಆಚಾರ್ಯ ವಿನೋಬಾ ಭಾವೆ (೧೮೯೫–೧೯೮೨)

ಇವರನ್ನು ಗಾಂಧೀಜಿ ಪ್ರಥಮ ಸತ್ಯಾಗ್ರಹಿ ಎಂದು ಗೊತ್ತುಮಾಡಿದ್ದರು. ಇವರು ಬಾಲ ಬ್ರಹ್ಮಚಾರಿಯಾಗಿದ್ದರು. ಅಲ್ಲದೆ ಆಧ್ಯಾತ್ಮಿಕ ಸಾಧಕರು; ಬಹುಭಾಷಾ ಪಂಡಿತರೂ ಆಗಿದ್ದರು. ಭೂದಾನ ಚಳುವಳಿಯ ಆದ್ಯ ಪ್ರವರ್ತಕರಾಗಿದ್ದರು. ದೇಶದಾದ್ಯಂತ ಪಾದಯಾತ್ರಿಕರಾಗಿ ಕೃತಯುಗಿ ವಿನೋಬಾ ಎನಿಸಿದ್ದರು. ತಮಗಾಗಿ, ಸಾಮಾನ್ಯರಿಗಾಗಿ ಮತ್ತು ಪಂಡಿತರಿಗಾಗಿ ಮೂರು ಬಗೆಯ ಆಧ್ಯಾತ್ಮಿಕ ಸಾಹಿತ್ಯ ರಚಿಸಿದರು. ವಿವಿಧ ಧರ್ಮಗಳ ಸಮನ್ವಯ, ಆಧ್ಯಾತ್ಮ ಜ್ಞಾನ–ವಿಜ್ಞಾನಗಳ ಸಮನ್ವಯ ಸಾಧಿಸಿದರು. ಆದ್ದರಿಂದ ಅವರಿಗೆ ಸಮನ್ವಯಚಾರ್ಯ ಎಂಬ ಹೆಸರು ಬಂತು. ಅವರ ಸ್ವಯಿಚ್ಛೆ ಮರಣವೂ ಒಂದು ಚರ್ಚೆಯ ವಿಷಯವಾಗಿತ್ತು. ಜಗತ್ತಿನ ಮುಂದೆ ಹೊಸ ಆದರ್ಶವನ್ನು ಮಂಡಿಸುವಂಥದಾಗಿತ್ತು, ಅದು ಮೃತ್ಯುವಿನ ಕ್ಷೇತ್ರದಲ್ಲಿ ಮಾಡಿದ ಅದ್ಭುತ ಪ್ರಯೋಗದಂತಿತ್ತು. ಅವರ ಗೀತಾ ಪ್ರವಚನ ಲೋಕ ಪ್ರಸಿದ್ಧ ಗ್ರಂಥ. ಜಗತ್ತಿನ ಹಲವಾರು ಭಾಷೆಗಳಲ್ಲಿ ಅದರ ಅನುವಾದ ಪ್ರಕಟವಾಗಿದೆ. ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿ ಸೆರೆಮನೆ ವಾಸ ಅನುಭವಿಸಿದರು. ಆದರೆ ಅವರು ಎಂದೂ ಸರ್ಕಾರದಿಂದ ಗೌರವ ಅಪೇಕ್ಷಿಸಲಿಲ್ಲ.

ಶಂಕರರಾವ್ ದೇವ್ (೧೮೯೪–೧೯೭೪)

ಬರೋಡಾ ಕಾಲೇಜಿನಲ್ಲಿ ವಿನೋಬಾ ಸಹಪಾಠಿಗಳಾಗಿದ್ದರು. ಚಂಪಾರಣ್ಯ ಸತ್ಯಾಗ್ರಹದಲ್ಲಿ ಗಾಂಧೀಜಿಯ ಮಾರ್ಗದರ್ಶನ ಪಡೆದು ರಾಜೇಂದ್ರ ಪ್ರಸಾದರೊಡನೆ ಕಾರ್ಯಮಾಡಿದರು. ಮಲ್ಪಿ ಪೇಣಾ ಸತ್ಯಾಗ್ರಹದ ಮುಖ್ಯ ನಾಯಕರಲ್ಲೊಬ್ಬರಾಗಿದ್ದರು. ಆ ಕಾರಣದಿಂದ ೧೯೨೨ರಲ್ಲಿ ಮೊದಲು ಒಂದು ತಿಂಗಳು ಅನಂತರ ಬಂಧಿಸಲ್ಪಟ್ಟು ಮೂರು ತಿಂಗಳು ಸೆರೆವಾಸ ಅನುಭವಿಸಿದರು. ಸೆರೆಮನೆಯಲ್ಲಿ ಆಷಾಢ ಏಕಾದಶಿಯ ದಿನ ಕೆಲಸ ಮಾಡಲು ತಿರಸ್ಕರಿಸಿದ್ದಕ್ಕಾಗಿ ಮೂವತ್ತು ಛಡಿ ಏಟಿನ ಶಿಕ್ಷೆ ಅನುಭವಿಸ ಬೇಕಾಯಿತು. ಪ್ರತಿ ಛಡಿ ಏಟಿಗೂ 'ಮಹಾತ್ಮಾ ಗಾಂಧೀಜಿ ಕಿ ಜೈ' ಎಂದು ಮೂರ್ಛೆ ಹೋಗುವವರೆಗೂ ಘೋಷಿಸುತ್ತಿದ್ದರು. ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ಸನ್ನು ಸಂಘಟಿಸಿ ೧೯೩೦ರ ವರೆಗೂ ಅದರ ನಾಯಕರಾಗಿ ಮತ್ತು ಒಂದು ವರ್ಷ ಅದರ ಅಧ್ಯಕ್ಷರಾಗಿದ್ದರು. ಬಾರ್ಡೋಲಿ ಸತ್ಯಾಗ್ರಹದಲ್ಲಿ ಸರ್ದಾರ್ ಪಟೇಲರೊಡನೆ ಸಂಘಟಕರಾಗಿದ್ದರು. ಬ್ರಿಟಿಷರನ್ನು ಖಂಡಿಸಿ ಬರೆದ ಲೇಖನಗಳಿಗಾಗಿ ಎರಡು ವರ್ಷಗಳ ಕಾರಾಗೃಹ ಶಿಕ್ಷೆ ಅನುಭವಿಸಿದರು. ಸ್ವರಾಜ್ಯ, ಲೋಕ ಸಂಗ್ರಹ, ಲೋಕಶಕ್ತಿ (ದಿನಪತ್ರಿಕೆ) ಸತ್ಯಾಗ್ರಹಿ ಪತ್ರಿಕೆಗಳ ಸಂಪಾದಕರಾಗಿ ಉತ್ತಮ ಮರಾಠಿ ಲೇಖಕರೆನಿಸಿ ದುಡಿದಿದ್ದರು. ಅಸಹಕಾರ ಯೋಗ, ಮಹಾತ್ಮರ ಕಾರಾಗೃಹ ಅನುಭವ, ಸ್ವರಾಜ್ಯ ಸೋಪಾನ ಸರ್ವೋದಯ ಇತಿಹಾಸ ಇತ್ಯಾದಿ ಪುಸ್ತಕಗಳನ್ನು ಬರೆದರು. ಉಪ್ಪಿನ ಸತ್ಯಾಗ್ರಹದಲ್ಲಿ ಎರಡು ಬಾರಿ, ವೈಯಕ್ತಿಕ ಸತ್ಯಾಗ್ರಹದಲ್ಲಿ ೧೮ ತಿಂಗಳು ಮತ್ತು ೧೯೪೨ರಲ್ಲಿ ಸೆರೆವಾಸದಲ್ಲಿದ್ದರು. ಭಾರತೀಯ ಕಾಂಗ್ರೆಸ್‌ನ ೧೯೪೬ ರಿಂದ ೧೯೫೦ರ ವರೆಗೆ ಮಹಾಕಾರ್ಯದರ್ಶಿಯಾಗಿದ್ದರು. ಸಂಯುಕ್ತ ಮಹಾರಾಷ್ಟ್ರ ಚಳುವಳಿಯ

ನಾಯಕರಾಗಿದ್ದರು. ಅದು ಹಿಂಸಾಯುತವಾದಾಗ ಅದನ್ನು ವಿರೋಧಿಸಿ ೩೦ ದಿನ ಉಪವಾಸ ಮಾಡಿದರು. ಪುಣೆಯ ಸಾಸವಾಡದಲ್ಲಿ ಆಶ್ರಮ ಸ್ಥಾಪಿಸಿದರು.

ಕಾಕಾ ಕಾಲೇಲ್‌ಕರ್ (೧೮೮೫–೧೯೮೧)

ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಅಭ್ಯಾಸ ಮಾಡಿ ೧೯೦೭ನೇ ವರ್ಷ ಪದವೀಧರರಾದರು. ೧೯೦೯ರಲ್ಲಿ ಸ್ವಲ್ಪ ಕಾಲ ಬೆಳಗಾವಿಯಲ್ಲಿ ಶಿಕ್ಷಕರಾದರು. ಸ್ವಲ್ಪ ಕಾಲ ಬರೋಡಾದಲ್ಲಿಯೂ ಶಿಕ್ಷಕರಾಗಿದ್ದರು. (ಅಲ್ಲಿಯ ಶಿಕ್ಷಣ ಸಂಸ್ಥೆಯೇ ೧೯೪೨ರಲ್ಲಿ ಮುಚ್ಚಿಹೋಯಿತು. ಅನಂತರ ಸ್ವಲ್ಪ ಕಾಲ ಹಿಮಾಲಯದಲ್ಲಿದ್ದರು, ಹರಿದ್ವಾರ ಮತ್ತು ಸಿಂಧ್ ಪ್ರಾಂತ್ಯದ ಹೈದರಾಬಾದಿನಲ್ಲಿ ಸ್ವಲ್ಪ ಸಮಯ ಬೋಧಕರಾಗಿದ್ದರು.) ೧೯೧೪ರಲ್ಲಿ ಶಾಂತಿನಿಕೇತನದ ಶಿಕ್ಷಕರಾದರು. ಮೂರು ವರ್ಷ ಅಂದರೆ ೧೯೧೫ರಲ್ಲಿ ಅಲ್ಲಿಯೇ ಗಾಂಧೀಜಿಯನ್ನು ಕಂಡರು. ಗಾಂಧೀಜಿ ನಿಧನವಾಗುವವರೆಗೂ ಅವರ ಜೊತೆಯಲ್ಲಿಯೇ ಇದ್ದು ಬಿಟ್ಟರು. ಸಬರಮತಿ ಆಶ್ರಮ ಶಾಲೆಯಲ್ಲಿ ಶಿಕ್ಷಕರಾಗಿದ್ದು ಅನಂತರ ೧೯೨೮–೩೫ರ ವರೆಗೆ ಎಂಟು ವರ್ಷಗಳ ಕಾಲ ಗುಜರಾತ್ ವಿದ್ಯಾಪೀಠದ ಉಪಕುಲಪತಿಯಾಗಿದ್ದರು. ಗಾಂಧೀಜಿ ಜೊತೆ ಸೇವಾಗ್ರಾಮ ಆಶ್ರಮಕ್ಕೆ ಬಂದರು. ಹಿಂದೂಸ್ತಾನಿ ಭಾಷಾ ಪ್ರಚಾರ ಕಾರ್ಯದ ಜವಾಬ್ದಾರಿಯನ್ನು ಗಾಂಧೀಜಿ ಅನುಮತಿಯಂತೆ ನಿರ್ವಹಿಸಿದರು. ೧೯೨೨ರಿಂದ ೧೯೪೬ರ ವರೆಗೆ ಐದು ಬಾರಿ ದೀರ್ಘಾವಧಿ ಸೆರೆವಾಸವನ್ನು ಅನುಭವಿಸಿದರು. ಮರಾಠಿ ಮತ್ತು ಗುಜರಾತಿಯಲ್ಲಿ ಅನೇಕ ಪುಸ್ತಕಗಳನ್ನು ಬರೆದರು. ೧೯೫೨ರಿಂದ ೧೯೬೪ರ ವರೆಗೆ ರಾಜ್ಯಸಭಾ ಸದಸ್ಯರಾಗಿದ್ದರು. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಸರ್ಕಾರಕ್ಕೆ ವರದಿ ಸಲ್ಲಿಸಿದರು. ಆಗ ಮಾತನಾಡಿ ದೇಶದಲ್ಲಿ ಹಿಂದುಳಿದ ವರ್ಗಗಳು ಮೂರು. ಒಂದು ಹರಿಜನ, ಎರಡು ಗಿರಿಜನ ಮತ್ತು ಸ್ತ್ರೀಜನ ಎಂದಿದ್ದರು. ಗುಜರಾತಿ ಸಾಹಿತ್ಯ ಸಮ್ಮೇಳನದ ೧೯೫೯ರ ಅಧ್ಯಕ್ಷರಾಗಿದ್ದರು. ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದರು.

ಕೆ. ಕೇಳಪ್ಪನ್ (೧೮೯೦–೧೯೭೧)

೧೯೧೨ರಲ್ಲಿ ಪದವೀಧರರಾಗಿ ಮುಂಬೈಯಲ್ಲಿ 'ಲಾ' ಕಾಲೇಜಿನ ವಿದ್ಯಾರ್ಥಿಯಾಗಿದ್ದರು. ಅಸಹಕಾರ ಆಂದೋಲನ ಆರಂಭವಾದಾಗ ಕಾಲೇಜು ತೊರೆದು ಚಳುವಳಿಯಲ್ಲಿ ಧುಮುಕಿದರು. ೧೯೨೧ರಲ್ಲಿ ಅಲ್ಪಕಾಲದ ಸೆರೆವಾಸವಾಯಿತು. ಮಲಬಾರ್‌ನಲ್ಲಿ ಮಾಪ್ಲಾ ದಂಗೆ ನಡೆದಾಗ ಅಲ್ಲಿ ಶಾಂತಿನೆಲಸಲು ಅಪಾರವಾಗಿ ಶ್ರಮಿಸಿದರು. ವೈಕೋಂ ಸತ್ಯಾಗ್ರಹದಲ್ಲಿ ಅವರದು ಹಿರಿಯ ಪಾತ್ರ. ಕೇರಳದಲ್ಲಿ ಉಪ್ಪಿನ ಸತ್ಯಾಗ್ರಹದ ನೇತೃತ್ವ ವಹಿಸಿದ್ದರು. ಒಂಭತ್ತು ತಿಂಗಳ ಶಿಕ್ಷೆ ಆಯಿತು. ೧೯೩೧ರಲ್ಲಿ ಗುರುವಾಯೂರ್ ಮಂದಿರಕ್ಕೆ ಹರಿಜನರ ಪ್ರವೇಶಕ್ಕಾಗಿ ಸತ್ಯಾಗ್ರಹ ಆರಂಭಿಸಿ, ೧೯೩೨ರಲ್ಲಿ ಅಮರಣಾಂತ ಉಪವಾಸ ಕೈಗೊಂಡರು. ಗಾಂಧೀಜಿಯ ಅದೇಶಕ್ಕನುಸಾರ ಉಪವಾಸ ನಿಲ್ಲಿಸಿದರು. 'ಮಾತೃಭೂಮಿ'ಯ ಒಂದು ವರ್ಷ ಸಂಪಾದಕರಾಗಿದ್ದರು. ವೈಯಕ್ತಿಕ ಸತ್ಯಾಗ್ರಹದಲ್ಲಿ ೧೯೪೦ನೇ ವರ್ಷ ಕೇರಳದ ಪ್ರಥಮ ಸತ್ಯಾಗ್ರಹಿಯಾಗಿ ಗಾಂಧೀಜಿಯಿಂದ ನೇಮಿಸಲ್ಪಟ್ಟರು. ೧೯೪೨ರಲ್ಲಿ ಮೂರುವರ್ಷಗಳ ಕಾಲ ಸೆರೆಮನೆಯಲ್ಲಿದ್ದರು. ಜೀವನದ ಕೊನೆಯವರೆಗೂ ಮದ್ಯ ನಿಷೇಧ ಮತ್ತು ಖಾದಿ ಕಾರ್ಯಕ್ಕಾಗಿ ದುಡಿದರು. (ಮುಂದುವರಿಯುವುದು......)

ಜನಪದ ಸೇವಾ ಟ್ರಸ್ಟ್ ಸಮಾಚಾರ

* ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ಕರುಣಾಗೃಹ ಕಟ್ಟಡವನ್ನು ಸುಸ್ಥಿತಿಗೆ ತರುವ ಕೆಲಸ ಮುಂದುವರಿದು ಪ್ರಥಮ ಹಂತದ ಕೆಲ ಮುಖ್ಯ ಕೆಲಸಗಳು ಮುಗಿದವು. ಎರಡನೇ ಹಂತದ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಹಂತದ ಕೆಲಸದಲ್ಲಿ ಮುಖ್ಯವಾದುದು ಸುಣ್ಣ ಬಣ್ಣ ಮಾಡುವುದು. ಈ ಕೆಲಸವನ್ನು ಕುರಿತು ರೂಪರೇಶೆ ಮತ್ತು ಅಂದಾಜು ಖರ್ಚನ್ನು ತಯಾರಿಸಲು ನೆರವಾಗುವುದಕ್ಕೆ ಟ್ರಸ್ಟಿನ ಖಜಾಂಚಿ ಶ್ರೀ ಎನ್. ಪ್ರಭಾಕರರವರು ಬೆಂಗಳೂರಿನಿಂದ ಬಂದು ಹೋದರು. ಅದೇ ಸಮುಯದಲ್ಲಿ ಸಂಸ್ಥೆಯ ಲೆಕ್ಕಪತ್ರಗಳನ್ನು ಪರಿಶೀಲಿಸಿದರು.

* ಕರುಣಾಗೃಹ ಕಟ್ಟಡದ ಸುಸ್ಥಿತಿಯ ಕೆಲಸಕ್ಕೆ ಧನ ಸಹಾಯ ಮಾಡಬೇಕೆಂದು ಟ್ರಸ್ಟಿನ ಅಭಿಮಾನಿಗಳನ್ನೂ, ದಾನಿಗಳನ್ನೂ ವಿನಂತಿಸಿಕೊಂಡಿದ್ದರ ಮೇರೆಗೆ ಶಿವಮೊಗ್ಗೆಯಲ್ಲಿರುವ ಶ್ರೀ ಡಿ.ಎಸ್.ನಾಗಭೂಷಣರವರು ಎರಡು ಸಾವಿರ ರೂಪಾಯಿಗಳನ್ನು ಕಳುಹಿಸಿದ್ದಾರೆ. ಶ್ರೀ ನಾಗಭೂಷಣರವರಿಗೆ ಟ್ರಸ್ಟ್ ಆಭಾರಿಯಾಗಿದೆ.

* ಬಹಳ ಸಮಯದಿಂದ ಮೇಲುಕೋಟೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಯನ್ನು ಪ್ರಾರಂಭಿಸಬೇಕೆಂದು ಯೋಚನೆಯಿದ್ದಿತ್ತು. ಅದು ಈಗ ನೆರವೇರಿದೆಯೆಂದು ತಿಳಿಸಲು ಸಂತೋಷವೆನಿಸುತ್ತದೆ. ಭರತನಾಟ್ಯ ಶಿಕ್ಷಣ ತರಗತಿಗಳನ್ನು ಪ್ರಾರಂಭಿಸಲಾಯಿತು. ಮೈಸೂರಿನ ಸುಪ್ರಸಿದ್ಧ ಭರತನಾಟ್ಯ ಕಲಾವಿದೆ ಶ್ರೀಮತಿ ಶೀಲಾ ಶ್ರೀಧರರವರ ನೆರವು ಮತ್ತು ಮಾರ್ಗದರ್ಶನದಲ್ಲಿ ಈ ತರಗತಿಗಳನ್ನು ಪ್ರಾರಂಭಿಸಲಾಗಿದೆ.

* ನೀರು ಸಂಗ್ರಹಣೆಯ ಕ್ಷೇತ್ರದಲ್ಲಿ ಗಮನೀಯ ಮತ್ತು ಗಣನೀಯ ಸೇವೆ ಸಲ್ಲಿಸುತ್ತಿರುವ ಮತ್ತು ಜನಪ್ರಿಯ 'ಅಡಿಕೆಪತ್ರಿಕೆ'ಯ ಸಂಪಾದಕರಾದ ಶ್ರೀ ಶ್ರೀಪಡ್ರೆಯವರು ಹಾಗು ಅಮೇರಿಕಾದ ಅಯೋವಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಟ್ರಸ್ಟಿಗೆ ಭೇಟಿಕೊಟ್ಟರು.

* ಪ್ರತಿ ಮಂಗಳವಾರದ ಹಿರಿಯ ನಾಗರಿಕರ ಸಭೆಗಳು ನಡೆದವು. ಮೈಸೂರು ನಗರದ ಖ್ಯಾತ ಹೋಮಿಯೋಪಥಿ ವೈದ್ಯರೂ ಮತ್ತು ಟ್ರಸ್ಟಿನ ಆಹ್ವಾನಿತ ಸದಸ್ಯರೂ ಆಗಿರುವ ಡಾ.ಮನೋಹರರವರು ಹಿರಿಯ ನಾಗರಿಕರ ಆರೋಗ್ಯ ಪರೀಕ್ಷೆಮಾಡಿ ಔಷಧಿ ಕೊಟ್ಟರು. ಕರುಣಾಗೃಹದ ಕಿಟಕಿಗಳಿಗೆ ಬಣ್ಣ ಹಚ್ಚುವ ಮೊದಲು ಅವುಗಳನ್ನು ಸ್ವಚ್ಛಮಾಡುವ ಕೆಲಸದಲ್ಲಿ ಮಕ್ಕಳು ನೆರವಾದರು.

* ಶ್ರೀಲಂಕಾದಿಂದ ನಿರ್ಮಲ್ ರೋಷನಿ ಎಂಬ ಯುವತಿ ಎರಡು ವಾರಗಳ ವಾಸ್ತವ್ಯಕ್ಕಾಗಿ ಬಂದಳು. ಈಕೆ ಇಂಗ್ಲೆಂಡಿನ ಕಂಪನಿಯೊಂದರಲ್ಲಿ ಹಣಕಾಸಿನ ವಿಭಾಗದಲ್ಲಿ ಕೆಲಸಮಾಡುತ್ತಿದ್ದಾಳೆ. ಟ್ರಸ್ಟಿನಲ್ಲಿ ತನ್ನ ವಾಸ್ತವ್ಯದ ಸಮಯದಲ್ಲಿ ಟ್ರಸ್ಟಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾಳೆ.

* ಮಂಡ್ಯದ ಗಾಂಧೀಭವನದಲ್ಲಿ ನಡೆದ ಸರ್.ಎಂ.ವಿಶ್ವೇಶ್ವರಯ್ಯನವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಹಾಗೂ ಮೈಸೂರು ಗಾಂಧೀಭವನದಲ್ಲಿ ನಡೆದ ರೈತರ ಆತ್ಮಹತ್ಯೆಯ ಸಮಸ್ಯೆಗೆ ಗಾಂಧೀ ವಿಚಾರದ ಪರ್ಯಾಯ ಎಂಬ ಗೋಷ್ಟಿಯಲ್ಲಿ ಟ್ರಸ್ಟಿನ ಅಧ್ಯಕ್ಷರು ಭಾಗವಹಿಸಿದರು.

* ಧ್ಯಾನ ಮತ್ತು ಪ್ರಾಣಚಿಕಿತ್ಸೆಯ ಬಗ್ಗೆ ಒಂದು ದಿನದ ತರಗತಿ ನಡೆಯಿತು ಸುಮಾರು ನಲ್ವತ್ತು ಜನರು ಭಾಗವಹಿಸಿದ್ದರು.


* ಟ್ರಸ್ಟಿನ ಖಾದಿ ಚಟುವಟಿಕೆಯ ಉಪಸಮಿತಿಯ ಸಭೆ ನಡೆಯಿತು.

* ಶ್ರೀ ಬಿ.ಎಸ್.ರಾಮಚಂದ್ರ, ಬೆಂಗಳೂರು; ಶ್ರೀ ಎಸ್.ಪಾರ್ಥಸಾರಥಿ, ಬೆಂಗಳೂರು; ಎಂ.ಸಿ.ಕೆ.ಎಸ್.ಟ್ರಸ್ಟ್, ಬೆಂಗಳೂರು ಮತ್ತು ಶ್ರೀ ಡಿ.ಎಸ್. ನಾಗಭೂಷಣ, ಶಿವಮೊಗ್ಗ ಇವರು ಸೆಪ್ಟೆಂಬರ್ ಮಾಹೆಯಲ್ಲಿ ಟ್ರಸ್ಟಿಗೆ ಧನಸಹಾಯ ಮಾಡಿದ ದಾನಿಗಳಾಗಿದ್ದಾರೆ.

* * *

ಜನಪದ ನಿಲಯದ ಅಂತರಂಗದಲ್ಲಿ....೫

- ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟಿನ ಬೆಳವಣಿಗೆಗೆ ಸಹಾಯ ಮಾಡಿದ ಯುವಕರ ಸಾಲು ಕರುಣಾಗೃಹದ ಹಳೆ ವಿದ್ಯಾರ್ಥಿ ಕುಮಾರಸ್ವಾಮಿ, ಹನುಮಂತ, ರಾಚಪ್ಪ ಮತ್ತು ನರಸಿಂಹ ಅವರಿಂದ ಪ್ರಾರಂಭವಾಗುತ್ತದೆ. ಈಗಾಗಲೆ ಅವರು ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರವನ್ನು ಕಟ್ಟುವಲ್ಲಿ ಯಾವ ರೀತಿ ಶ್ರಮಿಸಿದರೆಂಬುದನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ. ಮುಂದೆ ಇವರು ತಮ್ಮದೇ ಪ್ರತ್ಯೇಕವಾದ ಅಭಿರುಚಿಯ ಕ್ಷೇತ್ರವನ್ನು ಆಯ್ಕೆಮಾಡಿಕೊಂಡು, ಆ ಕ್ಷೇತ್ರಗಳಲ್ಲಿಯೂ ಮುಂಚೂಣಿಯಲ್ಲಿದ್ದುಕೊಂಡೇ ಜವಾಬ್ದಾರಿ ನಿರ್ವಹಿಸಿಕೊಂಡು ಬಂದರು. ಇವರ ಸಮಕಾಲೀನರಾದ ಸಂತೋಷ್ ತಮ್ಮ ಇಂಜಿನಿಯರಿಂಗ್ ವ್ಯಾಸಂಗದ ನಂತರ ಮರಳಿ ಮೇಲುಕೋಟೆಗೆ ಬಂದು ಟ್ರಸ್ಟಿನ ಕಾರ್ಯಕ್ರಮಗಳಲ್ಲ ಪೂರ್ಣಾವಧಿಯ ಕಾರ್ಯಕರ್ತನಾಗಿ ತೊಡಗಿಸಿಕೊಂಡರು. ಇಂಜನಿಯರಿಂಗ್ ಪದವಿ ಪಡೆಯಲು ಸಾಧ್ಯವಾಗದೇ ಹೋಯಿತು. ಅದಕ್ಕೆ ಮುಖ್ಯ ಕಾರಣ ಮೈಸೂರು ನಗರದಲ್ಲಿ ಇದ್ದುಕೊಂಡು ಓದುವ ಸರಿಯಾದ ವ್ಯವಸ್ಥೆಯಾಗದೇ ಇದ್ದುದು, ಹಾಗೂ ಶಿಕ್ಷಣದ ಖರ್ಚನ್ನು ನಿರ್ವಹಿಸಲು ಸಾಧ್ಯವಾಗದೇ ಇದ್ದುದು. ಮೇಲುಕೋಟೆಗೆ ಬಂದು ಟ್ರಸ್ಟಿನ ಪೂರ್ಣಾವಧಿ ಕಾರ್ಯಕರ್ತರಾದ ಮೇಲೆ ಅವರು ಮುಖ್ಯವಾಗಿ ಹೊಸಜೀವನದಾರಿ ಕೇಂದ್ರದ ಅಭಿವೃದ್ಧಿಯತ್ತ ತಮ್ಮ ಗಮನವನ್ನು ಹರಿಸಿದರು. ಅದೇ ಹೊತ್ತಿಗೆ ವಿದೇಶಿ ಯುವಕರು ಟ್ರಸ್ಟಿಗೆ ಸ್ವಯಂ ಸೇವಕರಾಗಿ ಬರುವ ಸಂದರ್ಭವೂ ಒದಗಿ ಬಂದಿತು. ಮೇಲುಕೋಟೆಗೆ ಬಂದು ಟ್ರಸ್ಟಿನ ಅಂದಿನ ಕಾರ್ಯಕಲಾಪಗಳನ್ನು ಮತ್ತು ಸಂಸ್ಥೆ ಹೊಂದಿರುವ ಧ್ಯೇಯೋದ್ದೇಶ್ಯ ಹಾಗೂ ಆದರ್ಶವನ್ನು ತಿಳಿದ ಅವರು ಟ್ರಸ್ಟಿಗಾಗಿ ತಮ್ಮ ತನು-ಮನ-ಧನವನ್ನು ಕೊಡಲು ಅಪೇಕ್ಷಿಸಿದರು. ಅದಕ್ಕಾಗಿ ನಿರ್ದಿಷ್ಟ ಯೋಜನೆಗಳನ್ನು ಹಾಕಿಕೊಳ್ಳುವುದು ಅಗತ್ಯವಾಯಿತು. ಯುವಕರಾಗಿದ್ದ ಸಂತೋಷ್ ಅವರಿಗೆ ಇದು ಸಂತೋಷದ ಕೆಲಸವಾಗಿ ಕಂಡುಬಂತು. ವಿದೇಶಿ ಯುವಕರು ೫-೬ ವಾರಗಳ ಕಾಲ ಇದ್ದು ಯಾವುದಾದರೊಂದು ಸ್ಪಷ್ಟವಾದ ಹಾಗೂ ಉಪಯುಕ್ತವಾದ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಬಯಸಿದರು. ತಾವು ತೊಡಗುವ ಯೋಜನೆಯ ಪೂರ್ತಿಗಾಗಿ ಆಂಶಿಕ ಧನಸಹಾಯವನ್ನೂ ಕೊಡಲು ಬಯಸಿದರು. ಈ ಯೋಜನೆಗಳಲ್ಲಿ ಭಾಗವಹಿಸುವುದರ ಮೂಲಕ ತಾವು ಭಾರತದ ಸಂಸ್ಕೃತಿಯನ್ನೂ ತಿಳಿದುಕೊಳ್ಳುವ ಆಸಕ್ತಿಯನ್ನೂ ತೋರಿಸಿದರು. ಹೀಗೆ ವಿವಿಧ ಉದ್ದೇಶ್ಯಗಳಿಂದ ಟ್ರಸ್ಟಿನಲ್ಲಿ ಸೇವೆ ಸಲ್ಲಿಸಲು ಮುಂದೆ ಬರುವ ವಿದೇಶಿ ಯುವಕರಿಗೆ ಹೊಸ

ಜೀವನದಾರಿಯಲ್ಲಿ ಅವಕಾಶ ಕಲ್ಪಿಸಿಕೊಡುವ ಕೆಲಸವನ್ನು ಸಂತೋಷ್‌ರವರು ನಿರ್ವಹಿಸಲು ಪ್ರಾರಂಭಿಸಿದರು. ಆಗ ಹೊಸಜೀವನದಾರಿ ಬಹಮಟ್ಟಿಗೆ ಖಾಲಿ ಬಿಳಿ ಹಾಳೆಯಂತಿತ್ತು. ಆ ಹಾಳೆಯ ಮೇಲೆ ಟ್ರಸ್ಟಿನ ಉದ್ದೇಶ್ಯಕ್ಕನುಗುಣವಾಗಿ ಅಭಿವೃದ್ಧಿಯ ನಕ್ಷೆ ಬರೆಯಬೇಕಾಗಿತ್ತು. ಈ ಕೆಲಸದಲ್ಲಿ ಅವರ ಇಂಜನಿಯರಿಂಗ್ ವ್ಯಾಸಂಗ ಬಹುಮಟ್ಟಿಗೆ ಸಹಾಯಕ್ಕೆ ಬಂದಿತು. ಆದರೆ ವ್ಯವಸಾಯ ಕ್ಷೇತ್ರ ತುಂಬ ಅಪರಿಚಿತವಾಗಿತ್ತು. ಹೊಸ ಜೀವನ ದಾರಿ ಕ್ಷೇತ್ರವು ಕೃಷಿ ಪ್ರಧಾನವಾಗಿದ್ದುದರಿಂದ ವ್ಯವಸಾಯದ ಅಭಿವೃದ್ಧಿಯತ್ತ ಗಮನ ಹರಿಸುವುದು ಅನಿವಾರ್ಯವಾಯಿತು. ವೃತ್ತಿಪರ ಕೃಷಿಯ ಸಂಸ್ಕಾರ ಇಲ್ಲದೇ ಇದ್ದುದರಿಂದ ಸಂತೋಷ ಹೊಸ ಜೀವನ ದಾರಿ ಕ್ಷೇತ್ರದಲ್ಲಿ ತಮ್ಮ ಸ್ವಂತ ತಿಳುವಳಿಕೆಯಿಂದ ಹಾಗೂ ಇತರರ ವ್ಯವಸಾಯ ಕ್ರಮವನ್ನು ಗಮನಿಸಿ ಹಾಗೂ ಅಲ್ಲಿ ಕೆಲಸ ಮಾಡುತ್ತಿದ್ದ ಕೃಷಿ ಕಾರ್ಮಿಕರ ಸಲಹೆ ಮತ್ತು ಅನುಭವಗಳ ಆಧಾರದ ಮೇಲೆ ವ್ಯವಸಾಯದ ಕಾರ್ಯಕ್ರಮದಲ್ಲಿ ತೊಡಗಬೇಕಾಯಿತು. ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆಗಳ ಮಾರ್ಗದರ್ಶನವನ್ನೂ ಪಡೆಯಬೇಕಾಯಿತು. ಈಗಾಗಲೇ ನಿರ್ಮಾಣವಾಗಿದ್ದ ತೆಂಗಿನ ತೋಟವನ್ನು ಸುಸ್ಥಿತಿಗೆ ತರಬೇಕಾದ ಪ್ರಯತ್ನವನ್ನು ಮಾಡಬೇಕಾಯಿತು. ಪೂರ್ಣಗೊಳಿಸಲು ಸಾಧ್ಯವಾಗದೇ ಇರುವ ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕಾಗಿ ಸಮಯವನ್ನು ಕಳೆಯದೇ ಅದೇ ಸಮಯವನ್ನು ಟ್ರಸ್ಟಿನ ಹೊಸ ಜೀವನ ದಾರಿಯ ಅಭಿವೃದ್ಧಿಗೆ ವಿನಿಯೋಗಿಸುವುದು ಹೆಚ್ಚು ಅರ್ಥಪೂರ್ಣವಾಗುವುದೆಂದು ತಿಳಿದು ಸಂತೋಷ ತಮ್ಮನ್ನು ಸಮಗ್ರ ಬೆಳವಣಿಗೆಗೆ ತನ್ಮಯತೆ, ನಿಷ್ಠೆ ಮತ್ತು ತಮ್ಮ ಭವಿಷ್ಯದ ಪೂರ್ವಾಪರ ಚಿಂತನೆಯಿಲ್ಲದೆ ತೊಡಗಿಸಿಕೊಂಡರು. ಆಗ ಅವರ ಜೀವನ ಮೂವತ್ತರ ಹರೆಯದಲ್ಲಿ ಸಾಗುತ್ತಿತ್ತು.

ಹೊಸ ಜೀವನ ದಾರಿ ಕೇಂದ್ರವನ್ನು ಸದಾ ಚಟುವಟಿಕೆಯುಕ್ತವನ್ನಾಗಿ ಮಾಡಬೇಕಾದರೆ ಅಲ್ಲಿ ವಿವಿಧ ಉದ್ದೇಶ್ಯಗಳಿಗನುಗುಣವಾಗಿ ಹಲವಾರು ಕಟ್ಟಡಗಳ ನಿರ್ಮಾಣ ಅಗತ್ಯವಾಗಿತ್ತು. ಆ ಕೇಂದ್ರದಲ್ಲಿ ಇದ್ದ ಒಂದೆರಡು ಮನೆಗಳು ಶಿಥಿಲವಾಗಿದ್ದವು. ಇನ್ನೆಲ್ಲ ಕಡೆ ಕೇವಲ ಬಯಲು. ಒಂದರ್ಥದಲ್ಲಿ ಹೊಸ ಜೀವನ ದಾರಿ ಕೇಂದ್ರ ಪ್ರಾರಂಭದಲ್ಲಿ ಬೆಂಗಾಡಾಗಿತ್ತು. ಮಣ್ಣು ಫಲವತ್ತಾಗಿರಲಿಲ್ಲ. ಹೆಚ್ಚಾಗಿ ಮರಳು ಮಿಶ್ರಿತವಾದ ಮಣ್ಣು ಇತ್ತು. ಕೇವಲ ಮೂರು ನಾಲ್ಕು ಅಡಿಗಳಲ್ಲಿಯೇ ಎಲ್ಲೆಲ್ಲಿಯೂ ಕಲ್ಲು ಭೂಮಿ ದೊರೆಯುತ್ತಿತ್ತು. ನೀರಿನ ಮೂಲ ಎಲ್ಲಿಯೂ ಕಾಣಬರುತ್ತಿರಲಿಲ್ಲ. ಅಕ್ಕಪಕ್ಕದ ಹಳ್ಳಿಯವರು ಆ ಪ್ರದೇಶವನ್ನು ಗೋಮಾಳದಂತೆ ಉಪಯೋಗಿಸುತ್ತಿದ್ದರು. ಒಂದು ರೀತಿಯಲ್ಲಿ ಹೊಸ ಜೀವನ ದಾರಿ ಕೇಂದ್ರವನ್ನು ಕಟ್ಟುವುದೆಂದರೆ ಇಸ್ರೇಲಿನ ಮರಳು ಭೂಮಿಯಲ್ಲಿ ಕ್ಯುಬುತ್ಸ್‌ಗಳನ್ನು ನಿರ್ಮಿಸಿದ ಯಹೂದ್ಯರ ಸಾಹಸದಂತೆಯೇ ಇತ್ತು. ಕೇಂದ್ರವನ್ನು ಹಸಿರುಮಾಡಬೇಕಿತ್ತು, ಕ್ರಿಯಾ ಕೇಂದ್ರವನ್ನು ಮಾಡಬೇಕಿತ್ತು. ಈ ಸವಾಲನ್ನೆದುರಿಸಲು ಯುವ ಪಡೆ ಸಿದ್ಧವಾಗಿತ್ತು.

(ಮುಂದುವರಿಯುವುದು...)

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

ಶ್ರೀ ಹೆಚ್.ಎಸ್. ದೊರೆಸ್ವಾಮಿ

ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಕ್ಕಾಗಿ ಇವರಿಗೆ ಕೃತಜ್ಞತೆಗಳು.

* * *

ಜನಪದ ಧ್ವನಿ

ಪ್ರಚಲಿತ ವಿಷಯಗಳ ಬಗ್ಗೆ ಓದುಗರ ವಿಚಾರ ಸ್ಪಂದನದ ಪ್ರಕಟಣೆಗಾಗಿ ಈ ಅಂಕಣ ಮೀಸಲು. ಆದ್ದರಿಂದ ಜಾಗೃತ ಓದುಗರು ತಮ್ಮ ಅನಿಸಿಕೆಗಳನ್ನು ಸಂಕ್ಷಿಪ್ತವಾಗಿ ಬರೆದ ಲೇಖನಕ್ಕೆ ಸ್ವಾಗತ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ



KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

Dr. Kousthubha
Upadhyaya
139, Ist floor,
B-2, B. Block
Janak Puri
New Delhi - 110058.

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.Phone : 08236 – 299854, 316344
e-mail : janapada@yahoo.com Printed at Sanketh Mudrana, Melkote.